ಏಪ್ರಿಲ್-ಜೂನ್-2021

ಸಂಪುಟ : 3 ಸಂಚಿಕೆ : 2

# ಕೃಷಿವನ

ತ್ರೈ ಮಾಸಿಕ ವಾರ್ತಾಪತ್ರ
ಖಾಸಗಿ ಪ್ರಸಾರಕ್ಕಾಗಿ


April-June 2021

# KRUSHI VANA

*Quarterly news letter*






ಪರಿಸರ ಸಂರಕ್ಷಣೆ
ನಮ್ಮೆಲ್ಲರ ಹೊಣೆ
ಸಾಲು ಮರದ ತಿಮಕ್ಕನವರು
ನಮಗೆಲ್ಲ ಸ್ಫೂರ್ತಿ
ವಿಶ್ವ ಪರಿಸರ
ದಿನದ ಶುಭಾಶಯಗಳು





### ಸುಭಾಷಿತ

'ನಾವು ವಿಶ್ವದ ಕಾಡುಗಳಿಗೆ ಏನು ಮಾಡುತ್ತಿದ್ದೇವೆಂದರೆ, ನಾವು ನಮಗಾಗಿ ಮತ್ತು ಒಬ್ಬರಿಗೊಬ್ಬರು ಏನು ಮಾಡುತ್ತಿದ್ದೇವೆ ಎಂಬುದರ ಪ್ರತಿಬಿಂಬವಾಗಿದೆ'.

–ಮಹಾತ್ಮ ಗಾಂಧಿ

# ಕೃಷಿವನ

ತ್ರೈ ಮಾಸಿಕ ವಾರ್ತಾಪತ್ರ

Volume: 3 Issue: 2

ಸಂಪುಟ: ೩ ಸಂಚಿಕೆ: ೨


## ಸಂಪಾದಕೀಯ ಮಂಡಳಿ

**ಗೌರವ ಸಂಪಾದಕರು**

ಶ್ರೀ ಎನ್. ಸಂಪಂಗಿ, ಭಾ.ಅ.ಸೇ(ನಿ)

**ಸಂಪಾದಕರು**

ಶ್ರೀ ದೀಪಕ್ ಶರ್ಮ, ಭಾ.ಅ.ಸೇ(ನಿ)

**ಸಹ ಸಂಪಾದಕರು**

ಶ್ರೀ ಹೆಚ್.ಜಿ. ಶಿವಾನಂದಮೂರ್ತಿ, ಭಾ.ಅ.ಸೇ(ನಿ)

**ಸದಸ್ಯರು**

ಶ್ರೀ ಎ.ಎಂ. ಅಣ್ಣಯ್ಯ, ಭಾ.ಅ.ಸೇ(ನಿ)

ಡಾ. ಎನ್. ಸ್ವಾಮಿ ರಾವ್

ಡಾ. ಎಮ್. ಮಹಾದೇವ ಮೂರ್ತಿ.

ಶ್ರೀಮತಿ ಶೋಭಾ ಎಚ್.ಜಿ.



## ಕಚೇರಿ ವಿಳಾಸ

ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ (ನೋಂ)

ವನವಿಕಾಸ, ನೆಲಮಹಡಿ,

18ನೇ ಅಡ್ಡರಸ್ತೆ, ಮಲ್ಲೇಶ್ವರಂ,

ಬೆಂಗಳೂರು–560003

ದೂ: 080 23566126

Email: iaftbangalore@gmail.com

www.iaft.co.in


## ಮನವಿ

ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯು (IAFT) 2013 ರಿಂದ ಕಾರ್ಯ ನಿರ್ವಹಿಸುತ್ತಿದೆ. ಇಲ್ಲಿ ಕೃಷಿ ಅರಣ್ಯದಲ್ಲಿ ಆಸಕ್ತಿಯುಳ್ಳ ಅಖಿಲ ಭಾರತ ಹಾಗೂ ಕರ್ನಾಟಕ ರಾಜ್ಯ ಸೇವೆಯ ಹಾಲಿ ಹಾಗೂ ನಿವೃತ್ತ ಅಧಿಕಾರಿಗಳು, ಪ್ರಗತಿಪರ ರೈತರು ಹಾಗೂ ಕೃಷಿ ವಿಶ್ವ ವಿದ್ಯಾನಿಲಯದ ಹಾಲಿ ಹಾಗೂ ನಿವೃತ್ತ ಉಪ ಕುಲಪತಿಗಳು, ಪ್ರಾಧ್ಯಾಪಕರು, ರೈತರು ಸದಸ್ಯರಾಗಿರುತ್ತಾರೆ. ಈ ಹಿರಿಯ ಹಾಗೂ ಅನುಭವಿ ತಜ್ಞರಿಂದ ಸರ್ಕಾರ, ಅರಣ್ಯ ಇಲಾಖೆ ಹಾಗೂ ರೈತರ ನಡುವೆ ಕೃಷಿ ಅರಣ್ಯ ಬೆಳೆಸುವಲ್ಲಿ ಸಲಹೆ ಸಹಕಾರ ನೀಡಲಾಗುತ್ತಿದೆ. ಈ ಸಂಸ್ಥೆಗೆ ಸದಸ್ಯರಾಗಲು ಬಯಸುವವರು ಸಂಸ್ಥೆಯ ಜಾಲತಾಣ (www.iaft.co.in)ದಲ್ಲಿರುವ ಅರ್ಜಿ ನಮೂನೆಯ ಪ್ರತಿಯನ್ನು ಪಡೆದು ಸದಸ್ಯತ್ವ ಶುಲ್ಕವನ್ನು IAFTಯ ಈ ಕೆಳಗಿನ ಅಕೌಂಟ್‌ಗೆ ಚೆಕ್/ಡಿಡಿ/NEFT ಮಾಡಲು ಕೋರಿದೆ. ಭರ್ತಿ ಮಾಡಿದ ಅರ್ಜಿಯನ್ನು ಈ ಕಛೇರಿಗೆ ಕಳುಹಿಸಲು ಕೋರಿದೆ.

Canara Bank,
18th Cross, Malleshwaram,
Bengaluru.
Account Holder Name: IAFT
SB Account No: 04242010115100
IFSC: CNRB0010424

**ಎ.ಎಂ. ಅಣ್ಣಯ್ಯ,**
ಕಾರ್ಯದರ್ಶಿ

## ಪರಿವಿಡಿ


| | ಲೇಖನ | ಪುಟ |
|---|---|---|
| 1 | ಬುದ್ಧಿವಂತಿಕೆಯ ಭೂ ಬಳಕೆ (ಸಂಪಾದಕೀಯ) | 04 |
| 2 | ಹಲಸು–ಬಹುಪಯೋಗಿ ಮರ | 05 |
| 3 | ಹೆಬ್ಬೇವು (Melia dubia) | 07 |
| 4 | ಕೃಷಿ ಅರಣ್ಯದ ಉತ್ತೇಜನಕ್ಕಿರುವ ಕಾನೂನಿನ ಅಡಚಣೆಗಳು | 08 |
| 5 | ಕೃಷಿಅರಣ್ಯ ಉತ್ಪನ್ನಗಳ ಮಾರಾಟ | 09 |
| 6 | ಕೃಷಿ ಬ್ರಹ್ಮ ಡಾ. ಎಲ್. ನಾರಾಯಣರೆಡ್ಡಿ | 12 |



## ಜಾಹೀರಾತು ವಿವರಗಳು

ಕೃಷಿವನ ವಾರ್ತಾಪತ್ರಿಕೆಯಲ್ಲಿ ಜಾಹೀರಾತು ನೀಡಲು ಈ ಕೆಳಗಿನ ದರಗಳನ್ನು ನಿಗದಿ ಮಾಡಿದೆ. ಜಾಹೀರಾತು ನೀಡಲು ಕೋರಿದೆ.

| ಕ್ರ.ಸಂ | ವಿಸ್ತೀರ್ಣ | ಕಪ್ಪು–ಬಿಳುಪು ದರ (ರೂ.ಗಳಲ್ಲಿ) | ವರ್ಣಮಯ ದರ (ರೂ.ಗಳಲ್ಲಿ) | ಅವಧಿ |
|---|---|---|---|---|
| 1 | 1/4 ಪುಟ | 2500/– | 5000/– | 1 ವರ್ಷ |
| 2 | 1/2 ಪುಟ | 5000/– | 10000/– | 1 ವರ್ಷ |
| 3 | 1 ಪುಟ | 10000/– | 20000/– | 1 ವರ್ಷ |


Publisher: IAFT, Editor (ಸಂಪಾದಕರು): Dipak Sarmah, IFS (Retd), KRUSHI VANA, Quarterly News Letter, April-June-2021
Printed By: S.K. Chandrashekar, Rathna Offset Printers, #120, 1st Main Road, Cauvery Nadhi Road, Brindavana Nagar, Bangalore-560019

Volume: 3
Issue: 2

ಸಂಪಾದಕೀಯ....

# ಬುದ್ಧಿವಂತಿಕೆಯ ಭೂ ಬಳಕೆ



ಮೈಸೂರು ರಾಜ್ಯದ ಎರಡು ಶತಮಾನಗಳ ಹಿಂದಿನ ಕೃಷಿ ನೋಟವು ಅತ್ಯುತ್ತಮವಾಗಿತ್ತು. ಅಂದೂ ಸಹ ನೀರಿನ ಲಭ್ಯತೆಯುಳ್ಳ ಉತ್ತಮವಾದ ಭೂಮಿಯನ್ನು ಅಡಿಕೆ ಬೆಳೆಯಲು ಕಾಯ್ದಿರಿಸಲಾಗುತ್ತಿತ್ತು. ನೀರಾವರಿ ಬೆಳೆಗಳಾದಂತಹ ಭತ್ತ, ಕಬ್ಬು, ಒಣ ಭೂಮಿ ಭತ್ತ (ಹೊಡ್ಡಿ ಭತ್ತ), ತೆಂಗು, ರಾಗಿ ಮುಂತಾದವುಗಳನ್ನು ಸ್ವಲ್ಪ ಕಡಿಮೆ ನೀರಿನ ಲಭ್ಯತೆಯ ಪ್ರದೇಶದಲ್ಲಿ ಬೆಳೆಯಲಾಗುತ್ತಿತ್ತು. ಫಲವತ್ತಾದ ಮತ್ತು ಸಾಕಷ್ಟು ನೀರು ದೊರೆಯುವ ಭೂಮಿಯಲ್ಲಿ ವಿವಿಧ ಹಣ್ಣಿನ ತೋಟಗಳು ಮತ್ತು ತೋಪುಗಳನ್ನು ಬೆಳೆಸಲಾಗುತ್ತಿತ್ತು. ಇಲ್ಲಿ ವೀಳ್ಯದೆಲೆ ಬಳ್ಳಿಯೂ ಸೇರಿದಂತೆ ವಿವಿಧ ಹಣ್ಣು ಮತ್ತು ತರಕಾರಿ ಬೆಳೆಗಳನ್ನು ಬೆಳೆಸಲಾಗುತ್ತಿತ್ತು. ಅಂದಿನ ದಿನಗಳಲ್ಲಿ ಕೃಷಿಯು ಪೂರ್ಣವಾಗಿ ಸಾವಯವ ಪದ್ಧತಿಯಿಂದ ಕೂಡಿತ್ತು. ರಾಸಾಯನಿಕ ಗೊಬ್ಬರಗಳು ತಿಳಿದಿರಲಿಲ್ಲ. ದನಗಳ ಸಗಣಿಯು ಪ್ರಧಾನ ಗೊಬ್ಬರವಾಗಿತ್ತು. ಆದರೆ ಇದು ಎಲ್ಲಾ ಭೂಮಿಗೂ ಸಾಕಾಗುತ್ತಿರಲಿಲ್ಲ. ಆದ್ದರಿಂದ ಇದರ ಪ್ರಮಾಣವನ್ನು ವರ್ಷದ ವಿವಿಧ ಸಮಯಗಳಲ್ಲಿ ದೊರೆಯುವ ಒಣಗಿದ ಹುಲ್ಲು, ಹಸಿ ಹುಲ್ಲು, ಒಣಗಿದ ಎಲೆಗಳು, ಹಸಿರೆಲೆಗಳು ಮತ್ತು ಮನೆಯ ತ್ಯಾಜ್ಯ ಮುಂತಾದವುಗಳ ಬಳಕೆಯಿಂದ ಹೆಚ್ಚಿಸಲಾಗುತ್ತಿತ್ತು. ಕೋಲಾರ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳ ಹೆಚ್ಚಿನ ಪ್ರದೇಶಗಳು ಮತ್ತು ಬೆಂಗಳೂರು, ಕಡೂರು, ಹಾಸನ, ಮೈಸೂರು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಕೆಲವು ಭಾಗಗಳು ಕಡಿಮೆ ಮಳೆ ಬೀಳುವ ಪ್ರದೇಶಗಳಾಗಿದ್ದು, ಆಗಿಂದಾಗ್ಗೆ ಬರಗಾಲದಂತಹ ಪರಿಸ್ಥಿತಿಯನ್ನು ಎದುರಿಸುತ್ತಿದ್ದವು. ಇಂತಹ ಬರಗಾಲದಂತಹ ಪರಿಸ್ಥಿತಿಯಲ್ಲೂ ರೈತರು ಅಡಿಕೆ, ಕಬ್ಬು, ನೀರಾವರಿ ಭತ್ತ, ಮುಂತಾದವುಗಳನ್ನು ಮಧುಗಿರಿ, ಸಿರಾ ಮತ್ತು ಚಿಕ್ಕನಾಯಕನಹಳ್ಳಿ ಇತರೆ ಪ್ರದೇಶಗಳಲ್ಲಿ ಬೆಳೆಯುತ್ತಿದ್ದರು. ಎಲೆ, ಬಳ್ಳಿ ಹಾಗೂ ಕಬ್ಬನ್ನು ಕೋಲಾರದಲ್ಲಿ ಸಾಮಾನ್ಯವಾಗಿ ಬೆಳೆಯುತ್ತಿದ್ದರು. ಒಣ ಭೂಮಿಯ ಭತ್ತ (ದೊಡ್ಡ ಭತ್ತ)ವನ್ನು ಬರಗಾಲದ ಜಿಲ್ಲೆಗಳ ಕೆಲವು ಭಾಗಗಳಲ್ಲಿ ಬೆಳೆಯಲಾಗುತ್ತಿತ್ತು.

ತೀರಾ ಬರ ಪ್ರದೇಶದಲ್ಲೂ ವಿವಿಧ ಬೆಳೆಗಳನ್ನು ಬೆಳೆಯುವ ರೈತರ ಸಾಮರ್ಥ್ಯವು ಪ್ರಮುಖ ಮೂರು ಕಾರಣಗಳಿಂದ ಕೂಡಿತ್ತು.

**ಅ) ಬುದ್ಧಿವಂತಿಕೆಯ ಭೂ ಉಪಯೋಗ**

**ಆ) ಅಳತೆ ಪ್ರಮಾಣದಲ್ಲಿ ನೀರನ್ನು ಬಳಸುವುದು ಮತ್ತು**

**ಇ) ಭೂಮಿಯನ್ನು ತಂಪಾಗಿರಿಸಲು ಸ್ಥಳೀಯವಾದ ವಿವಿಧ ದಕ್ಷ ವಿಧಾನಗಳನ್ನು ಅನುಸರಿಸುತ್ತಿದ್ದುದ್ದು**

ಅಂದು ರೈತರು ಮರಗಳಿಗೆ ಮಹತ್ವದ ಸ್ಥಾನವನ್ನು ನೀಡಿದ್ದರು ಹಾಗೂ ಮರಗಳು ಇತರೆ ಸಸ್ಯಗಳು ಕೃಷಿಯೊಂದಿಗೆ ನಿರ್ವಹಿಸುವ ಪೂರಕ ಸಂಬಂಧವನ್ನು ತಿಳಿದುಕೊಂಡಿದ್ದರು. ಜೊತೆಗೆ ನೀರಿನ ಸಂರಕ್ಷಣೆ, ಮಣ್ಣಿನಲ್ಲಿ ಸಾವಯವ ಅಂಶಗಳ ಮತ್ತು ಫಲವತ್ತತೆಯನ್ನು, ಮರಗಳು ಮತ್ತು ಸಸ್ಯಗಳನ್ನು ಹೆಚ್ಚಿಸುವಂತಹ ಎಚ್ಚರಿಕೆಯ ಪ್ರಯತ್ನಗಳನ್ನು ಅನುಸರಿಸುತ್ತಿದ್ದರು. ರಾಜ್ಯದ ವಿವಿಧ ಭಾಗಗಳಲ್ಲಿ ರೈತರು ಗೊಬ್ಬರವನ್ನು ತಯಾರಿಸುವ ಮತ್ತು ಉಪಯೋಗಿಸುವ ವಿವಿಧ ವಿಧಾನಗಳನ್ನು ಅಳವಡಿಸಿಕೊಳ್ಳುತ್ತಿದ್ದರು. ರೈತರುಗಳು ಅವರ ಜಮೀನುಗಳ ಸುತ್ತ ವಿವಿಧ ರೀತಿಯ ಬೇಲಿ ಅಳವಡಿಸಿಕೊಳ್ಳುವ ಮತ್ತು ಬೆಳೆಸುವ ಪದ್ಧತಿಗಳನ್ನು ಕೇವಲ ಬೆಳೆಗಳ ಭೌತಿಕ ರಕ್ಷಣೆಗಷ್ಟೇ ಅಲ್ಲದೆ ಮಣ್ಣು ಮತ್ತು ನೀರಿನ ಸಂರಕ್ಷಣೆಗಾಗಿ ಬಳಸುತ್ತಿದ್ದರು.

ಎರಡು ಶತಮಾನಗಳ ಹಿಂದೆ ಅನುಸರಿಸುತ್ತಿದ್ದ ಕೃಷಿ ಪದ್ಧತಿಗಳು, ಇಂದಿಗೂ ಸಹ ಪ್ರಸ್ತುತವೆನಿಸಿದೆ. ಏಕೆಂದರೆ ಅಂದು ರೈತರು ನಿರಂತರವಾಗಿ ಭೂಮಿಯನ್ನು ತಂಪಾಗಿರಿಸುವುದಷ್ಟೇ ಅಲ್ಲದೆ ಹಸಿರಾಗಿಸುವ ಪ್ರಯತ್ನ ಬುದ್ಧಿವಂತಿಕೆಯಿಂದ ಕೂಡಿತ್ತು. ನಾವು ಏನೇ ಬೋಧಿಸಿದರು ಅಥವಾ ಬರವಣಿಗೆಯಲ್ಲಿ ಭೂಮಿಯು ಬಿಸಿಯಾಗುತ್ತಿರುವ ಬಗ್ಗೆ ತಿಳಿಸಿದರೂ, ವಾಸ್ತವದಲ್ಲಿ ಭೂಮಿಯ ಉಷ್ಣಾಂಶವನ್ನು ಕಡಿಮೆಗೊಳಿಸುವ ಪ್ರಯತ್ನವು ಪ್ರಾಯೋಗಿಕವಾಗಿ ಕೃಷಿ ಭೂಮಿಯಲ್ಲೇ ನಡೆಯಬೇಕಿದೆ. ಏಕೆಂದರೆ ರಾಜ್ಯದ ಹೆಚ್ಚಿನ ಭೌಗೋಳಿಕ ಪ್ರದೇಶವು ಕೃಷಿ ಭೂಮಿಯಿಂದ ಆವರಿಸಿಕೊಂಡಿದೆ. ಒಟ್ಟಾರೆಯಾಗಿ ಕೃಷಿ ಭೂಮಿಯು ಕರ್ನಾಟಕ ರಾಜ್ಯದ ಶೇ.65 ರಷ್ಟು ಭೌಗೋಳಿಕ ಪ್ರದೇಶವನ್ನು ಅತಿಕ್ರಮಿಸಿಕೊಂಡಿದೆ. ಕರ್ನಾಟಕದ ಪೂರ್ವ ಮೈದಾನ ಮತ್ತು ಒಳನಾಡು ಕರ್ನಾಟಕದಲ್ಲಿ ಆರ್ದ್ರತೆಯು (ಒಣ ಭೂಮಿ) ಬಹಳ ಹೆಚ್ಚಾಗಿದ್ದು, ಕೆಲವು ಭಾಗಗಳಲ್ಲಿ ಗೋಚರಿಸುತ್ತಿವೆ. ಇಲ್ಲಿ ಕೃಷಿ ಶೇ.80 ರಿಂದ 90 ರಷ್ಟಿದೆ. ಆದರೆ ಈ ಪ್ರದೇಶಗಳ ರಕ್ಷಣೆ, ಅರಣ್ಯ ಮತ್ತು ಮರಗಳ ಹೊದಿಕೆಯನ್ನು, ಅರಣ್ಯ ಪ್ರದೇಶಗಳೂ ಸೇರಿದಂತೆ ಎಲ್ಲಾ ಸಾರ್ವಜನಿಕ ಭೂಮಿ ಮತ್ತು ಕೃಷಿ ಭೂಮಿಯನ್ನು ಹಸಿರಾಗಿಸುವ ಸರ್ವ ಪ್ರಯತ್ನಗಳಿಂದ ಪರಿಸರದ ಉಷ್ಣತೆಯನ್ನು (ಭೂಮಿ ಬಿಸಿಯಾಗುವುದನ್ನು) ನಿಯಂತ್ರಿಸಬಹುದಾಗಿದೆ.

**– ಶ್ರೀ ದೀಪಕ್ ಶರ್ಮ**
**ಸಂಪಾದಕರು**

## ಸಂಕ್ಷಿಪ್ತ ಮಾಹಿತಿ

1. ಮಳೆಗಾಲವಾಗಿರುವುದರಿಂದ ಮರಗಿಡ ನೆಡುವವರು ಅರಣ್ಯ ಇಲಾಖೆಯ ಹತ್ತಿರದ ನರ್ಸರಿಗಳಲ್ಲಿ ರಿಯಾಯಿತಿ ದರದಲ್ಲಿ ಗಿಡಗಳನ್ನು ಪಡೆದು ನೆಡುವುದು. ಕೃಷಿಅರಣ್ಯ ಪ್ರೋತ್ಸಾಹ ಯೋಜನೆಯಲ್ಲಿ ಪ್ರೋತ್ಸಾಹ ಧನ ಪಡೆಯಲು ಕಾರ್ಯ ವ್ಯಾಪ್ತಿಯ ವಲಯ ಅರಣ್ಯ ಅಧಿಕಾರಿಗಳ ಕಛೇರಿಯಲ್ಲಿ ನೋಂದಾಯಿಸುವುದು.

2. **ನೂರು ವರ್ಷದ ಒಂದು ಮರದ ಮೌಲ್ಯ ರೂ. ಒಂದು ಕೋಟಿ.** ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯವು ರಚಿಸಿದ್ದ ಸಮಿತಿಯು ಮರದ ಮೊತ್ತವನ್ನು ನಿರ್ಧರಿಸುವ ರೀತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದೆ. ಒಂದು ಮರದ ವಯಸ್ಸನ್ನು ರೂ.74,500/– ಗಳಿಂದ ಗುಣಾಕಾರ ಮಾಡಿದರೆ ಬರುವ ಮೊತ್ತವೆ ಅದರ ಮೌಲ್ಯ. ಅಂದರೆ 30 ವರ್ಷಗಳ ಮರದ ಮೌಲ್ಯ ಸುಮಾರು 22 ಲಕ್ಷ ರೂಪಾಯಿಗಳು. ಈ ಮೌಲ್ಯದಲ್ಲಿ ಮರವೊಂದು ವರ್ಷಕ್ಕೆ ರೂ. 45,000/– ಆಮ್ಲಜನಕ ಬಿಡುಗಡೆ ಮಾಡುತ್ತದೆ ಹಾಗೂ ರೂ.20,000/– ಮೌಲ್ಯದ ಸಜೀವಿ ಗೊಬ್ಬರಗಳ ಮೂಲಕ ಮಣ್ಣಿಗೆ ಸೇರಿಸುವ ಪೋಷಕಾಂಶಗಳಾಗಿರುತ್ತದೆ ಎಂದು ವರದಿ ನೀಡಿದೆ. ಒಂದು ಮರ ಕಡಿದಂತೆ ಆ ಮರದ ನೆತ್ತಿ ಚಂಡೆಯ ಆಧಾರದಲ್ಲಿ ಚಿಕ್ಕ ಚಂಡೆ, ಮಧ್ಯಮ ಚಂಡೆ ಹಾಗೂ ದೊಡ್ಡ ಚಂಡೆಯ (Crown) ಮರ ಕಡಿದರೆ ಕ್ರಮವಾಗಿ ಒಂದು ಮರಕ್ಕೆ ಬದಲಾಗಿ 10, 25 ಮತ್ತು 50 ಗಿಡಗಳನ್ನು ನೆಡಬೇಕೆಂದು ವರದಿ ಸಲ್ಲಿಸಿದೆ. ಅಭಿವೃದ್ಧಿ ಯೋಜನೆಗಳಿಗಾಗಿ ಮರ ಕಡಿದಾಗ ಈ ಶಿಫಾರಸ್ಸನ್ನು ಪಾಲಿಸಿದರೆ ಪರಿಸರ ಸಮತೋಲನ ಕಾಪಾಡಲು ಸಾಧ್ಯ.

- ಕಾರ್ಯದರ್ಶಿ

# ಹಲಸು-ಬಹುಪಯೋಗಿ ಮರ

✍ ಹೆಚ್.ಜಿ. ಶಿವಾನಂದಮೂರ್ತಿ, ಭಾ.ಅ.ಸೇ(ನಿವೃತ್ತ) E-mail: shivanandamurthyifs@gmail.com ದೂ: 94481 26246

ಹಲಸು (Artocarpus heterophyllus) ಭಾರತದಲ್ಲಿಯೇ ಜನ್ಮ ತಾಳಿರುವ ಮತ್ತು ಹೆಸರುವಾಸಿಯಾಗಿರುವ ಮರ. ಇದನ್ನು ಬಾಂಗ್ಲಾದೇಶ, ಶ್ರೀಲಂಕಾ, ಮಯನ್ಮಾರ್, ಮಲೇಶಿಯಾ ಮತ್ತು ಬ್ರೆಜಿಲ್ ದೇಶಗಳಲ್ಲೂ ಬೆಳೆಯಲಾಗುತ್ತಿದೆ. ಹಲಸು ವಿಶ್ವದಲ್ಲಿಯೇ ಅತೀ ದೊಡ್ಡ ಗಾತ್ರದಲ್ಲಿ ಬೆಳೆಯುವ, ತಿನ್ನಲು ಯೋಗ್ಯವಾದ ಹಣ್ಣು. ಕೆಲವೊಂದು ಹಣ್ಣುಗಳು 70 ಕೆ.ಜಿ.ವರೆಗೂ ತೂಗುತ್ತವೆ. ನಮ್ಮ ದೇಶದಲ್ಲಿ ಬೆಳೆಯಲಾಗುವ ಉತ್ಕೃಷ್ಟ ಹಣ್ಣುಗಳಲ್ಲಿ ಉಪೇಕ್ಷಿತ ಹಣ್ಣು. ಸದಾ ಹಸಿರಿನಿಂದ ಕೂಡಿರುವ ಹಲಸಿನ ಮರವು ಮಳೆಯಾಶ್ರಯಿತ ಒಣ ಭೂಮಿಯಲ್ಲೂ ಸಹ ಬೆಳೆಯುವ ಮರವಾಗಿದೆ. ಮಾವಿನ ಜೊತೆಗೆ ಹಲಸಿಗೂ ಸಹ ಧಾರ್ಮಿಕ ಮತ್ತು ಶುಭ ಕಾರ್ಯಗಳಲ್ಲಿ ಸಮಾನ ಸ್ಥಾನವಿದೆ. ವೈಶಿಷ್ಟ್ಯವೆಂದರೆ ಹಲಸು ಭಾರತದ ಎಲ್ಲಾ ರಾಜ್ಯಗಳಲ್ಲಿ ಬೆಳೆಯುತ್ತಿದ್ದರೂ, ಉತ್ತರ ಭಾರತದಲ್ಲಿ ಹಿಮಾಲಯದ ತಪ್ಪಲಿನಿಂದ ದಕ್ಷಿಣ ಭಾರತದಾದ್ಯಂತ ಬೆಳೆಯಬಹುದಾಗಿದೆ. ಉತ್ತರ ಭಾರತದಲ್ಲಿ ಇದಕ್ಕೆ ಕೇವಲ ತರಕಾರಿಯ ಸ್ಥಾನ, ಆದರೆ ದಕ್ಷಿಣ ಭಾರತದಲ್ಲಿ ಇದನ್ನು ತರಕಾರಿಯಾಗಿ ಅಷ್ಟೇ ಅಲ್ಲದೆ, ಬಲಿತ ಹಣ್ಣುಗಳು ತಿನ್ನಲು ಬಹು ರುಚಿಕರವಾಗಿರುತ್ತವೆ. ಹಣ್ಣು ಬಲಿತಾಗ ವಾಸನೆಯು ಆಹ್ಲಾದಕರವಾಗಿದ್ದು ಬಹಳ ದೂರದಿಂದಲೇ ಗ್ರಹಿಸಬಹುದು. ಇದರಲ್ಲಿ ಹೆಣ್ಣು ಮತ್ತು ಗಂಡು ಹೂಗಳು ಬೇರೆ ಬೇರೆ ಗೊಂಚಲುಗಳಲ್ಲಿ ಬಿಡುತ್ತವೆ. ಆದುದರಿಂದ ಇದೊಂದು ಪರಕೀಯ ಪರಾಗಸ್ಪರ್ಶದಿಂದ ಕೂಡಿದ ಮರವಾಗಿದೆ.

ಹಲಸಿನ ಮರಗಳನ್ನು ಇದುವರೆಗೂ ವಾಣಿಜ್ಯ ಬೆಳೆಯಾಗಿ ಬೆಳೆಯುತ್ತಿಲ್ಲ. ಆದರೆ ಇತ್ತೀಚೆಗೆ ಕೆಲವು ರೈತರು ಅಲ್ಲಲ್ಲೇ ವಾಣಿಜ್ಯ ಬೆಳೆಯಾಗಿ ಬೆಳೆಯಲು ಪ್ರಯತ್ನಿಸಿರುತ್ತಾರೆ. ಸಾಮಾನ್ಯವಾಗಿ ಇದುವರೆಗೂ ಈ ಮರಗಳನ್ನು ಮನೆಯ ಹಿಂದೆ–ಮುಂದೆ, ಹಿತ್ತಲುಗಳಲ್ಲಿ, ತೋಟದ ಸುತ್ತ, ಹೊಲಗಳ ಬದುಗಳ ಮೇಲೆ, ರಸ್ತೆ ಬದಿಯಲ್ಲಿ ಹಾಗೂ ಪಶ್ಚಿಮ ಘಟ್ಟ ಪ್ರದೇಶದಲ್ಲಿ ಮರಮುಟ್ಟಿಗಾಗಿ (ಚೌಬೀನೆ), ವಿವಿಧ ಜಾತಿಯ ಹಲಸಿನ ಮರಗಳನ್ನು ಕಾಫೀ ಬೆಳೆಗೆ ನೆರಳಿಗಾಗಿ ಬೆಳೆಯಲಾಗುತ್ತಿದೆ. ಈ ಮರವು ಸಮುದ್ರ ಮಟ್ಟದಿಂದ 2400 ಮೀ. ಎತ್ತರದ ಗುಡ್ಡಗಾಡು ಪ್ರದೇಶಗಳಲ್ಲೂ ಬೆಳೆಯುತ್ತಿದ್ದು, ಮುಖ್ಯವಾಗಿ ತೇವಾಂಶವುಳ್ಳ, ಉಷ್ಣವಲಯದಲ್ಲಿ ಮತ್ತು ಉತ್ತಮವಾದ ನೀರು ಬಸಿಯುವ ಭೂಮಿಯಲ್ಲಿ ಬೆಳೆಯುತ್ತಿದೆ. ಹಲಸಿನ ಹಣ್ಣುಗಳು ಬಹಳ ಜನಪ್ರಿಯವಾಗಿವೆ. ಅನಾದಿ ಕಾಲದಿಂದಲೂ ಹೆಚ್ಚಾಗಿ ಬೆಳೆಯುತ್ತಿದ್ದರೂ ಸಹ ಇದೊಂದು ರೈತರಿಗೆ ಆರ್ಥಿಕವಾಗಿ ಲಾಭದಾಯಕ ಎಂಬುದು ಇತ್ತೀಚೆಗೆ ಮನವರಿಕೆಯಾಗುತ್ತಿದೆ. ಇದೊಂದು ಸಾವಯವ ಕೃಷಿಯಿಂದಲೇ ಬೆಳೆಯಬಹುದಾದ ಮರವಾಗಿರುವುದರಿಂದ, ಇದನ್ನು ಸಾವಯವ ಹಣ್ಣು ಎಂದು ಗುರುತಿಸಿ, ಹೆಚ್ಚಿನ ಬೆಲೆಗೆ ಮಾರಾಟ ಮಾಡಬಹುದು. ಸಾಮಾನ್ಯವಾಗಿ ಇದಕ್ಕೆ ರಾಸಾಯನಿಕ ಗೊಬ್ಬರಗಳನ್ನು ಹಾಕದೆ ಬೆಳೆಯುತ್ತಾರೆ. ಇದೊಂದು ಬಹುಪಯೋಗಿ ಮರ. ಇದರಿಂದ ಉತ್ತಮ ಮರಮುಟ್ಟು, ರಾಸುಗಳಿಗೆ ಮೇವು ವರ್ಷವಿಡೀ ಹೆಚ್ಚಿನ ಆಮ್ಲಜನಕ, ಎಲೆಗಳಿಂದ ಸಾವಯವ ಗೊಬ್ಬರ ಹಾಗೂ ಮನಸ್ಸಿಗೆ ತಂಪು ಹವಾಗುಣ ನೀಡುವ ನಿತ್ಯಹರಿದ್ವರ್ಣದ ಮರ. ಹೆಚ್ಚಿನ ಪರಿಶ್ರಮ ಮತ್ತು ಖರ್ಚಿಲ್ಲದೇ, ರಾಜ್ಯದ ಎಲ್ಲಾ ಹವಾಗುಣಗಳಲ್ಲಿ ಬೆಳೆಯಬಹುದು.

**ಬೆಳೆಸುವ ವಿಧಾನ:**

ಇದುವರೆಗೂ ಹಲಸನ್ನು ಹೊಲಗಳ ಬದುಗಳ ಮೇಲೆ, ತೋಟದ ಬೇಲಿ ಸಾಲುಗಳಲ್ಲಿ ಮತ್ತು ಮನೆಯ ಸುತ್ತಮುತ್ತಲಿನ ಹಿತ್ತಲುಗಳಲ್ಲಿ ಬೆಳೆಯುವುದರಿಂದ, ಮಳೆಗಾಲದ ಪ್ರಾರಂಭದಲ್ಲಿ 2ಅಡಿ X 2ಅಡಿ ಗುಂಡಿಗಳಲ್ಲಿ ಉತ್ತಮ ಜಾತಿಯ ಸಸಿಗಳನ್ನು ನೆಟ್ಟು ನೀರು ಮತ್ತು ಗೊಬ್ಬರ ಕೊಟ್ಟು ಜಾನುವಾರುಗಳಿಂದ ರಕ್ಷಿಸಿದರೆ, ಆರು ಅಥವಾ ಏಳನೇ ವರ್ಷದಿಂದಲೇ ಫಲವನ್ನು ಪಡೆಯಬಹುದು. ಹಲಸಿನ ಮರಕ್ಕೆ ಯಾವುದೇ ರಾಸಾಯನಿಕ ಗೊಬ್ಬರ ಹಾಗೂ ಕೀಟನಾಶಕಗಳ ಅವಶ್ಯಕತೆಯಿರುವುದಿಲ್ಲ. ಇದರ ಮತ್ತೊಂದು ವೈವಿಧ್ಯಮಯ ಗುಣವೆಂದರೆ, ಇದು ಅತೀ ಹೆಚ್ಚು ಹಾಗೂ ಕಡಿಮೆ ಮಳೆ ಬರುವಂತಹ ಹವಾಗುಣದಲ್ಲಿ ಬೆಳೆಯುತ್ತದೆ. ನಾಟಿ ಮಾಡಿದ 6 ರಿಂದ 8 ವರ್ಷಗಳಲ್ಲಿ ಹಣ್ಣುಗಳನ್ನು ಪಡೆಯಬಹುದು.

ಹಲಸು ಪರಕೀಯ ಪರಾಗಸ್ಪರ್ಶದಿಂದಲೇ ಹಣ್ಣುಗಳನ್ನು ಬಿಡುತ್ತದೆಯಾದರೂ, ಸಾಮಾನ್ಯವಾಗಿ ಬೀಜಗಳಿಂದಲೇ ಸಸಿ ಮಾಡಿ ನಾಟಿ ಮಾಡುತ್ತಾರೆ. ಇತ್ತೀಚಿನ ವರ್ಷಗಳಲ್ಲಿ ಉತ್ತಮ ಜಾತಿಯ ಹಲಸಿನ ಮರಗಳಲ್ಲಿ ಮೊಗ್ಗು ಕಸಿ ಮಾಡಿ ಸಸಿಗಳನ್ನು ತಯಾರಿಸುವ ವಿಧಾನವನ್ನು ಕೃಷಿ ವಿಜ್ಞಾನ ಕೇಂದ್ರ ಹಾಡೋನಹಳ್ಳಿಯಲ್ಲಿ ಯಶಸ್ವಿಯಾಗಿಸಿರುತ್ತಾರೆ. ಪ್ರತೀ ವರ್ಷವು ಉತ್ತಮ ಜಾತಿಯ ಕಸಿ ಮುಂದಿನ ಪುಟಕ್ಕೆ...



**ಕೃಷಿಅರಣ್ಯ ಸಂಸ್ಥೆಯ ಸದಸ್ಯತ್ವ**

| ಸದಸ್ಯತ್ವದ ವಿವರ | ಶುಲ್ಕ (ರೂ.) |
|---|---|
| ಸಂಸ್ಥೆ ಸದಸ್ಯತ್ವ | 25,000.00 |
| ಪೋಷಕ ಸದಸ್ಯತ್ವ | 20,000.00 |
| ಅಜೀವ ಸದಸ್ಯತ್ವ | 5,000.00 |
| ಸಹ ಸದಸ್ಯತ್ವ | 2,000.00 |
| ಸಾಮಾನ್ಯ ಸದಸ್ಯತ್ವ (ಕೃಷಿಕರಿಗೆ) | 100.00 |

ಮಾಡಿದ ಹಲಸಿನ ಸಸಿಗಳನ್ನು ತಯಾರಿಸಿ, ರೈತರು ಹಲಸನ್ನು ವೈಜ್ಞಾನಿಕವಾಗಿ ಬೆಳೆಯಲು ಪ್ರೋತ್ಸಾಹ ನೀಡುತ್ತಿದ್ದಾರೆ.

ಗ್ರಾಮಾಂತರ ಪ್ರದೇಶಗಳಲ್ಲಿ ರೈತರು ಸ್ಥಳೀಯವಾಗಿ ಕಂಡುಬರುವ ಉತ್ತಮ ಹಾಗೂ ರುಚಿಕರವಾದ ಹಣ್ಣುಗಳನ್ನು ಬಿಡುವ ಮರಗಳನ್ನು ಗುರುತಿಸಿ, ಅಂತಹ ಮರಗಳಿಂದ ಪಡೆದ ಹಣ್ಣಿನ ಬೀಜಗಳನ್ನು ಬೀಜದ ಸುತ್ತಲಿನ ಕವಚಕ್ಕೆ ಧಕ್ಕೆಯಾಗದಂತೆ, ಹಣ್ಣುಗಳಿಂದ ತೊಳೆಗಳನ್ನು ಬಿಡಿಸಿದ ದಿನದಂದೇ ನೇರವಾಗಿ ಪ್ಲಾಸ್ಟಿಕ್ ಕವರಿಗೆ ಹಾಕಿ ಮನೆಗಳಲ್ಲಿಯೇ ಸಸಿ ತಯಾರಿಸಲಾಗುವುದು.

## ವಾಣಿಜ್ಯ ಬೆಳೆಯಾಗಿ ಹಲಸು

ಹಲಸಿನಲ್ಲಿ ಮುಖ್ಯವಾಗಿ ಎರಡು ವಿಧವಾದ ಹಣ್ಣುಗಳನ್ನು ಮಲೆನಾಡಿನಲ್ಲಿ ಕಾಣಬಹುದು. ಅವುಗಳೆಂದರೆ ಒಂದು ಬಕ್ಕೆ (ಬರಿಕ್ಕ), ಎರಡನೆಯದು ತುಳುವ (ಅಂಬಲಿ). ಇವುಗಳಲ್ಲಿ ವಾಣಿಜ್ಯವಾಗಿ ಎಲ್ಲರೂ ಬಕ್ಕೆಯನ್ನು ಇಷ್ಟಪಡುತ್ತಾರೆ. ಏಕೆಂದರೆ ಇದರ ತೊಳೆಗಳು ಗಟ್ಟಿಯಾಗಿದ್ದು, ಬಿಡಿಸಲು ಹಾಗೂ ತಿನ್ನಲು ಸುಲಭ ಮತ್ತು ಹೆಚ್ಚು ರುಚಿಕರ. ಸಾಮಾನ್ಯವಾಗಿ ತುಳುವ (ಅಂಬಲಿ) ಹಲಸು ಮಲೆನಾಡು ಮತ್ತು ಕರಾವಳಿಯಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಇದನ್ನು ಹೆಚ್ಚಾಗಿ ತರಕಾರಿಯಾಗಿ ಮತ್ತು ಹಪ್ಪಳ ಮಾಡಲು ಬಳಸುವುದು ಕಂಡುಬಂದಿದೆ. ಹಲಸಿನ ಹಣ್ಣಿನ ಗಾತ್ರ, ಬಣ್ಣ, ಆಕಾರ, ತೊಳೆಯ ಬಣ್ಣ, ರುಚಿ ಬಹಳ ವೈವಿಧ್ಯಮಯವಾಗಿರುತ್ತದೆ. ಇವುಗಳಲ್ಲಿ ಹುಣ್ಣಿಮೆ ಚಂದ್ರನಂತೆ ಬಣ್ಣ ಹೊಂದಿರುವ ಚಂದ್ರ ಹಲಸಿಗೆ ಬಾರೀ ಬೇಡಿಕೆಯಿದೆ. ಗುಂಡಾಗಿ ರುದ್ರಾಕ್ಷಿಯನ್ನು ಹೋಲುವಂತಿರುವ, 2 ರಿಂದ 3 ಕೆ.ಜಿ. ತೂಕವುಳ್ಳ ರುದ್ರಾಕ್ಷಿ ಹಲಸಿಗೂ ಸಹ ಉತ್ತಮ ಬೇಡಿಕೆಯಿದೆ. ಇಂತಹ ಹಲವಾರು ಮರಗಳನ್ನು ಗುರುತಿಸಲಾಗಿದ್ದು, ಅವುಗಳನ್ನು ರೈತರು ಸುಲಭವಾಗಿ ಬೆಳೆಸಬಹುದಾಗಿದೆ. ಹಲವು ವಿಧದ ಹಲಸಿನ ಹಣ್ಣುಗಳನ್ನು ಕಾಣಬಹುದು. ಆದರೆ ಇಳುವರಿ, ಹಣ್ಣಿನ ಗಾತ್ರ, ಆಕಾರ, ತೊಳೆಯ ಬಣ್ಣ, ರುಚಿ, ಪರಿಮಳ ಇತ್ಯಾದಿಗಳನ್ನು ಗಣನೆಗೆ ತೆಗೆದುಕೊಂಡು, ಕೃಷಿ ವಿಶ್ವವಿದ್ಯಾನಿಲಯದ ತಜ್ಞರು, ಸಾರ್ವಜನಿಕರು, ಬೆಳೆಗಾರರು, ಗ್ರಾಹಕರು ಕೆಲವು ವಿಶಿಷ್ಟ ಮರಗಳನ್ನು ಗುರುತಿಸಿರುತ್ತಾರೆ. ಅವುಗಳಲ್ಲಿ ಪ್ರಮುಖವಾದವು ಈ ಕೆಳಗಿನಂತಿವೆ.

1. ದೊಡ್ಡಬಳ್ಳಾಪುರ ತಾಲ್ಲೂಕು ತೂಬಗೆರೆ ಹೋಬಳಿಯ ಕಾಚಳ್ಳಿ ಹಲಸು
2. ಮಾಗಡಿ ತಾಲ್ಲೂಕು ಜಾಣಗೆರೆ ಹಲಸು
3. ದೊಡ್ಡಬಳ್ಳಾಪುರ ತಾಲ್ಲೂಕು ತಪಸೀಹಳ್ಳಿ **'ಸದಾನಂದ'** ವರ್ಷಪೂರ್ತಿ ಹಣ್ಣು ಬಿಡುವ ಹಲಸು
4. ಮಲೆನಾಡಿನ ಅಂಟುರಹಿತ ಹಲಸು
5. ಸಖರಾಯ ಪಟ್ಟಣ ಹಲಸು
6. ಬೇಲೂರು ತಾಲ್ಲೂಕಿನ 'ಇಬ್ಬೀಡಿನ ಹಲಸು'
7. ಬೆಂಗಳೂರಿನ ಜಿಕೆವಿಕೆ ತೋಟಗಾರಿಕಾ ಕ್ಷೇತ್ರದಲ್ಲಿರುವ **ಸಿಂಗಪೂರ್ ಹಲಸು** (ಸಿಲೋನ್ ಹಲಸು). ಇದೊಂದು ಒಳ್ಳೆಯ ತಳಿಯಾಗಿದ್ದು ಬೇಗನೆ ಫಲ ಕೊಡುತ್ತದೆ. ಹಣ್ಣುಗಳು ಮಧ್ಯಮ ಗಾತ್ರದಾಗಿವೆ
8. ಹಳ್ಳಿ ಮೈಸೂರು ಹಲಸು
9. ಬೆಂಗಳೂರು ಲಾಲ್‌ಬಾಗ್‌ನಲ್ಲಿರುವ ಲಾಲ್‌ಬಾಗ್ **'ಮಧುರ ತಳಿ'**
10. ಇತರೆ ಸ್ಥಳೀಯ ತಳಿಗಳಾದ **ಚಂದ್ರ ಹಲಸು, ರುದ್ರಾಕ್ಷಿ ಹಲಸು**ಗಳನ್ನು ರಾಜ್ಯದ ಕೆಲವು ಭಾಗಗಳಲ್ಲಿ ಕಾಣಬಹುದು.

ಜೊತೆಗೆ ರೈತರು ಹಲಸು ಬಲಿತು ಹಣ್ಣಾಗುವ ಕಾಲಗಳನ್ನನುಸರಿಸಿ, ಸಂಕ್ರಾತಿ ಹಲಸು, ಶಿವರಾತ್ರಿ ಹಲಸು, ಯುಗಾದಿ ಹಲಸು, ಏಕಾದಶಿ ಹಲಸು ಹಾಗೂ ವರ್ಷಪೂರ್ತಿ ಹಣ್ಣು ಬಿಡುವ ಹಾಗೂ ಅಂಟಿಲ್ಲದ ಮರಗಳನ್ನು ಸಹ ಗುರುತಿಸಲಾಗಿದೆ.

ಇತ್ತೀಚಿನ ದಿನಗಳಲ್ಲಿ ಅನೇಕ ರೈತರು ಹಲಸನ್ನೂ ವಾಣಿಜ್ಯ ಮತ್ತು ಪೂರ್ಣ ಬೆಳೆಯಾಗಿ (Block Plantation) ಬೆಳೆಯುತ್ತಿದ್ದಾರೆ. ಕೆಲವರಂತೂ ದ್ರಾಕ್ಷಿ ಬೆಳೆಯ ಬದಲು ಹಲಸು ಬೆಳೆಸಿದ್ದಾರೆ. ಅವರುಗಳೆಂದರೆ ಹಾಸನ ಜಿಲ್ಲೆಯ ಅರಕಲಗೂಡಿನ ಶ್ರೀ ಚನ್ನೇಗೌಡರು 8 ಎಕರೆಯಲ್ಲಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವೆಂಕಟಗಿರಿಕೋಟೆ ಹಳ್ಳಿಯ ಶ್ರೀ ಕೃಷ್ಣಮೂರ್ತಿಯವರು 7 ಎಕರೆಯಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯ ಮಳಿಯಾದ ಹಲಸಿನ ಕೂಟದ ಶ್ರೀ ವೆಂಕಟಕೃಷ್ಣ ಶರ್ಮ ಅವರು ಬೆಳೆದಿರುವ ಎಲ್ಲಾ 300 ಹಲಸಿನ ಮರಗಳು ಕಸಿ ಮಾಡಿದವುಗಳಾಗಿರುತ್ತವೆ. ಇವರಿಗೆ ಕಸಿಗಿಡಗಳನ್ನು ಹಾಡೋನಹಳ್ಳಿ ಕೃಷಿ ವಿಜ್ಞಾನ ಕೇಂದ್ರದಿಂದ ಒದಗಿಸಲಾಗಿದೆ.

**ಹಲಸಿನ ಹಣ್ಣಿನ ಮೌಲ್ಯವರ್ಧನೆ ಮತ್ತು ಉಪಯೋಗಗಳು:**

ಹಲಸಿನ ಹಣ್ಣು ಅಧಿಕ ಪೋಷಕಾಂಶಗಳಿಂದ ಕೂಡಿದ ಆಕರ್ಷಕ ಬಣ್ಣ ಮತ್ತು ಪರಿಮಳ ಹೊಂದಿದ ಹಣ್ಣು. **ಇದರಲ್ಲಿ ಮುಖ್ಯ ಪೋಷಕಾಂಶಗಳಾದ ಪ್ರೋಟೀನ್, ಸಸಾರಜನಕ, ನಾರಿನಾಂಶ, ಶಕ್ತಿ, ಜಿಡ್ಡು, ಜೀವಸತ್ವಗಳಾದ 'ಎ' ಮತ್ತು 'ಸಿ' ಜೀವಸತ್ವ, ಸುಣ್ಣ, ರಂಜಕ, ಕಬ್ಬಿಣದಂತಹ ಖನಿಜಾಂಶಗಳನ್ನು ಹೊಂದಿದೆ.** ತೊಳೆಗಳನ್ನು ಬಿಡಿಸಿ ತಿನ್ನುವುದು ವಾಡಿಕೆ. ಆದರೆ ಈ ಹಣ್ಣನ್ನು ಊಟಕ್ಕೆ ಮೊದಲು ತಿನ್ನುವುದು ಒಳ್ಳೆಯದು. ಅದಕ್ಕೆ ಒಂದು ಗಾದೆ ಮಾತಿದೆ: ಅದೇನೆಂದರೆ **'ಹಸಿದು ಹಲಸಿನ ಹಣ್ಣು ತಿನ್ನು, ಉಂಡು ಮಾವಿನ ಹಣ್ಣು ತಿನ್ನು'**. ಕಾರಣ ಇದರಲ್ಲಿರುವ ಅಧಿಕ ಪೋಷಕಾಂಶಗಳಿಂದಾಗಿ.

ಹಲಸಿನ ತೊಳೆ, ಬೀಜ ಮತ್ತು ಎಳೆ ದಿಂಡಿನಿಂದ ಹಲವು ಮೌಲ್ಯವರ್ಧಿತ ಉತ್ಪನ್ನಗಳನ್ನು ತಯಾರಿಸಬಹುದು. ಎಳೆ ಹಲಸಿನ ಕಾಯಿಯನ್ನು ತರಕಾರಿಯಾಗಿ ಉಪಯೋಗಿಸಬಹುದು. ಹಲಸಿನ ಹಣ್ಣಿನ ತೊಳೆಗಳಿಂದ ಹಲ್ವ, ಜ್ಯೂಸ್, ಜ್ಯಾಮ್ ತಯಾರಿಸಬಹುದು. ಸಿಹಿ ತೊಳೆಗಳಿಂದ ಚಿಪ್ಸ್, ಹಪ್ಪಳ ತಯಾರಿಸಬಹುದು. ಅದೇ ರೀತಿ ಬೀಜದ ಹಿಟ್ಟಿನಿಂದ ಬೋಂಡಾ, ಚಪಾತಿ, ಬಿಸ್ಕತ್ತು ತಯಾರಿಸಬಹುದು.

ಹಲಸಿನ ಹಣ್ಣು ರಕ್ತದೊತ್ತಡ, ಮಧುಮೇಹದಂತಹ ರೋಗಿಗಳಲ್ಲಿ ರಕ್ತದಲ್ಲಿ ಸಕ್ಕರೆ ಅಂಶವನ್ನು ಕಡಿಮೆಗೊಳಿಸುವ ಹಾಗೂ ರಕ್ತದೊತ್ತಡವನ್ನು ನಿಯಂತ್ರಿಸುವ ಔಷಧಿಯ ಗುಣಗಳಿವೆಯೆಂದು ತಿಳಿದು ಬಂದಿದೆ.

ಹಲಸಿನ ಹಣ್ಣಿನ ಅಂಟು (ಮೇಣ) ಮತ್ತು ಮುಳ್ಳಿನಂತಿರುವುದರಿಂದ, ಈ ಹಣ್ಣು ಇದುವರೆಗೂ ಹೆಚ್ಚಾಗಿ ತಿಂಡಿ, ಅಡುಗೆ ಮತ್ತು ಊಟದಲ್ಲಿ ಬಳಕೆಯಾಗುತ್ತಿಲ್ಲ. ಆದರೆ ಎಳೆ ಹಲಸಿನ ಕಾಯಿಯನ್ನು ಡ್ರೆಸ್ಡ್ ಚಿಕನ್‌ನಂತೆ ಮೌಲ್ಯವರ್ಧನೆ ಮಾಡಿ, ಮಹಿಳೆಯರು ಅಡಿಗೆಯಲ್ಲಿ ಬಳಸಲು ಇಷ್ಟಪಡುವಂತೆ ಮಾಡಬಹುದು. ಎಳೆ ಹಲಸಿನ ಕಾಯಿಗೆ, ಯಾವುದೇ ಪರಿಮಳವಿರುವುದಿಲ್ಲ. ಹೀಗಾಗಿ ಇಷ್ಟವಾದ ಪರಿಮಳವನ್ನು ಹಾಕಿ ಮಂಚೂರ, ಕಬಾಬ್ ಮತ್ತು ಬಿರಿಯಾನಿಗಳಲ್ಲಿ ಬಳಸಬಹುದು.

ಮಹಾರಾಷ್ಟ್ರದ ವಿದರ್ಭದಲ್ಲಿ ಇದೊಂದು ಜನಪ್ರಿಯ ತರಕಾರಿಯಲ್ಲದೇ, ಮಾಂಸಹಾರಿ ಹೋಟೆಲ್‌ನಲ್ಲಿ ನಕಲು ಮಾಂಸವಾಗಿಯೂ ಉಪಯೋಗಿಸುತ್ತಾರೆ. ಹೀಗಾಗಿ ಈ ಹಲಸಿನ ಬೆಳೆಯು ಕೇವಲ ಸಮುದ್ರ ತೀರ ಅಥವಾ ಮಲೆನಾಡು ಪ್ರದೇಶಕ್ಕೆ ಸೀಮಿತ ಎಂದು ಹೇಳಲು ಬರುವುದಿಲ್ಲ. ಹಲಸಿನ ಬೇರು ಅತಿ ಆಳಕ್ಕೆ ಹೋಗುವುದರಿಂದ, ಕಡಿಮೆ ಆಳಕ್ಕೆ ಹೋಗುವ ಮರ-ಗಿಡಗಳಾದ ಕರಿಬೇವು, ನುಗ್ಗೇಕಾಯಿ, ಸೀತಾಫಲ ಮೊದಲಾದವುಗಳೊಡನೆ ಕೃಷಿ ವನದಲ್ಲಿ ಬೆಳೆಯಲು ಯೋಗ್ಯವಾದ ಮರವಾಗಿದೆ.

ಹಲಸಿನ ಮರದಲ್ಲಿಯ ಲಕ್ಷಾಂತರ ಎಲೆಗಳು ಉದುರುವುದರಿಂದ ಒಳ್ಳೆಯ ಸಾವಯವ ಗೊಬ್ಬರವಾಗಿ ಪರಿವರ್ತನೆಯಾಗುತ್ತದೆ. ಹಸಿರೆಲೆಗಳು ಆಡುಗಳಿಗೆ ಉತ್ತಮವಾದ ಆಹಾರವನ್ನೂ ಒದಗಿಸುವುದರಿಂದ, ದೊಡ್ಡಬಳ್ಳಾಪುರ ತಾಲ್ಲೋಕಿನ ತೂಬಗೆರೆ ಹೋಬಳಿಯ ಮನೆ-ಮನೆಗಳಲ್ಲಿ ಆಡುಗಳನ್ನು ಸಾಕುತ್ತಿರುವುದು ಗಮನಾರ್ಹ ಸಂಗತಿಯಾಗಿದೆ.

ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲೂ ಹಲಸನ್ನು ಬೆಳೆಸಲು ಪ್ರೋತ್ಸಾಹಿಸಬೇಕಿದೆ. ಏಕೆಂದರೆ ಬರ ಮತ್ತು ಅತಿವೃಷ್ಟಿ ಪರಿಸ್ಥಿತಿಯಲ್ಲಿ ಹಲಸಿನ ಮರ ರೈತರಿಗೆ ವರದಾನವಾಗಲಿದೆ. ರಾಜ್ಯದ ಎಲ್ಲಾ ಹವಾಗುಣಗಳಲ್ಲಿ ಉತ್ತಮವಾಗಿ ಬೆಳೆದು, ಆರ್ಥಿಕವಾಗಿ ರೈತನ ಕೈ ಹಿಡಿಯುವ 'ಕಲ್ಪವೃಕ್ಷ' ಎಂದೇ ಹೇಳಬಹುದು. ■

# ಹೆಬ್ಬೇವು (Melia dubia)

✍ ಶ್ರೀ ಬಿ.ಸ್. ರಘುನಾಥ್, ಮಾಜಿ ಅಧ್ಯಕ್ಷರು, ಜಿಲ್ಲಾ ಪಂಚಾಯತ್ ಚಿತ್ರದುರ್ಗ ಹಾಗೂ
ಕರ್ನಾಟಕ ಸರ್ಕಾರದ ಕೃಷಿ, ತೋಟಗಾರಿಕೆ ಮತ್ತು ಅರಣ್ಯ ಇಲಾಖೆ ರಾಜ್ಯ ಪ್ರಶಸ್ತಿ ಪುರಸ್ಕೃತರು ದೂ: 99450 03993



ಹೆಬ್ಬೇವು ರೈತರ ಆದಾಯದ ಬೆಳೆ. ಇದು ಒಂದು ಪವಾಡ ಸದೃಶ ಮರ. ಕರ್ನಾಟಕದ ಮಲೆನಾಡು ಪ್ರದೇಶದಲ್ಲಿ ಮತ್ತು ಮೈದಾನ ಪ್ರದೇಶದಲ್ಲಿ ಅಲ್ಲಲ್ಲಿ ಕಂಡುಬರುವ ಚುರುಕು ಗತಿಯಲ್ಲಿ ಬೆಳೆಯುವ ಮರ. ಗಿಡ ನೆಲೆ ನಿಲ್ಲಲು ಒಂದೇ ಮಳೆಗಾಲ ಸಾಕು. ಮರವು ನೇರವಾಗಿ ಸದೃಢವಾಗಿ ಬೆಳೆಯುತ್ತದೆ. ಗಿಡದ ಕೊಂಬೆಗಳು 10 ರಿಂದ 20 ಅಡಿ ಎತ್ತರದಲ್ಲಿ ಕಂಡು ಬರುತ್ತವೆ. ಬೀಜಗಳು ಮೊಳೆಯಲು ಹೆಚ್ಚು ಶಾಖ ಬೇಕಾಗುತ್ತದೆ. ಕುರಿ ಮತ್ತು ಆಡುಗಳು ತಿಂದು ಅದರ ಹಿಕ್ಕೆಯಿಂದ ದೊರೆತ ಬೀಜಗಳು ಹೆಚ್ಚಿಗೆ ಮೊಳೆಯುತ್ತವೆ. ದೊಡ್ಡ ಮರಗಳ ಬುಡದಲ್ಲಿ ಮಳೆಗಾಲದಲ್ಲಿ ಸಿಗುವ ಸಸಿಗಳನ್ನು ತಂದು ಸಸ್ಯ ಕ್ಷೇತ್ರಗಳಲ್ಲಿ ಪಾಲಿಥೀನ್ ಚೀಲದಲ್ಲಿ ಬೆಳೆಸಬಹುದು. 2 ಅಡಿ ಅಗಲ, 2 ಅಡಿ ಉದ್ದ, 2 ಅಡಿ ಆಳದ ಗುಂಡಿಗಳನ್ನು ತೆಗೆದು ಕೊಟ್ಟಿಗೆ ಗೊಬ್ಬರ ಹಾಕಿ ಮಳೆಗಾಲದಲ್ಲಿ ನೆಡಬೇಕು. 20 ರಿಂದ 30 ಸೆಂ.ಮೀ. ಎತ್ತರದ ಸಸಿಗಳು ನೆಡಲು ಯೋಗ್ಯವಾಗಿರುತ್ತವೆ.

ಮೊದಲನೇ ವರ್ಷ ಹೆಬ್ಬೇವಿನ ಗಿಡಗಳ ಮಧ್ಯೆ ರಾಗಿ, ಎಳ್ಳು, ಅವರೆ, ನೆಲಗಡಲೆ ಮತ್ತು ಹುರುಳಿ ಬೆಳೆಯಬಹುದು. 10 ಅಡಿx10 ಅಡಿ ಅಂತರದಲ್ಲಿ ಒಂದು ಎಕರೆಗೆ 437 ಗಿಡಗಳು, 12ಅಡಿ x 12 ಅಡಿ ಅಂತರದಲ್ಲಿ 300 ಗಿಡಗಳು, 15ಅಡಿ x 15 ಅಡಿ ಅಂತರದಲ್ಲಿ ಒಂದು ಎಕರೆಗೆ 193 ಗಿಡಗಳನ್ನು ಬೆಳೆಸಬಹುದು. ಜಮೀನಿನ ಸುತ್ತ ಬದುಗಳ ಮೇಲೆ 10 ಅಡಿ ಅಂತರದಲ್ಲಿ ಗಿಡ ನೆಡಬಹುದು. ಹೆಬ್ಬೇವಿನ ಸೊಪ್ಪು ಕುರಿ, ಮೇಕೆ ಹಾಗೂ ದನಗಳಿಗೆ ಒಳ್ಳೆಯ ಪೌಷ್ಠಿಕ ಮೇವು. ಮರಗಳಿಂದ ಉದುರುವ ಎಲೆ, ಕಡ್ಡಿಗಳಿಂದ 3 ರಿಂದ 4 ವರ್ಷಗಳ ಒಳಗೆ ಭೂಮಿಯಲ್ಲಿ ಒಳ್ಳೆಯ ಹ್ಯೂಮಸ್ ಅಭಿವೃದ್ಧಿಯಾಗುತ್ತದೆ. 2 ವರ್ಷದ ನಂತರ ಎಲ್ಲಾ ಮರಗಳಿಗೂ ಮೆಣಸು ಬಳ್ಳಿಯನ್ನು ಹಬ್ಬಿಸಬಹುದು. ಈ ಮರವು ಇಂಗಾಲವನ್ನು ಹೀರಿ ಶುದ್ಧ ಆಮ್ಲಜನಕವನ್ನು ಬಿಡುಗಡೆ ಮಾಡುತ್ತದೆ. ಭೂಮಿಯ ಫಲವತ್ತತೆಯ ಮೇಲೆ ಒಂದು ಮರ 8 ರಿಂದ 10 ವರ್ಷಕ್ಕೆ 20 ರಿಂದ 28 ಘನ ಅಡಿ ಮರವಾಗಿ ಬೆಳೆಯುತ್ತದೆ. ಒಂದು ಎಕರೆಗೆ 20 ರಿಂದ 25 ಲಕ್ಷ ರೂಪಾಯಿ ಒಟ್ಟು ಆದಾಯ ನಿರೀಕ್ಷಿಸಬಹುದು.

ಕರ್ನಾಟಕ ರಾಜ್ಯದಲ್ಲಿ ಒಟ್ಟು 190 ಲಕ್ಷ ಹೆಕ್ಟೇರ್ ಭೂಮಿ ಇದೆ. ಅದರಲ್ಲಿ 106 ಲಕ್ಷ ಹೆಕ್ಟೇರ್ ಭೂಮಿ ವ್ಯವಸಾಯಕ್ಕೆ ಯೋಗ್ಯವಾಗಿದೆ. ಉಳಿದ 84 ಲಕ್ಷ ಹೆಕ್ಟೇರ್ ಭೂಮಿ ಕಡಿಮೆ ಫಲವತ್ತತೆಯಿಂದ ಕೂಡಿದ್ದು ಸುಮಾರಾಗಿದೆ. ಈ ಜಮೀನಿನಲ್ಲಿ 100 ಕೋಟಿ ಘನ ಅಡಿ ಮರವನ್ನು 10 ವರ್ಷದಲ್ಲಿ ಬೆಳೆಸಬಹುದು. ಮಧ್ಯಮ ವರ್ಗದ 500 ಪ್ಲೈವುಡ್ ತಯಾರಿಕಾ ಘಟಕಕ್ಕೆ ಈ ಮರ ಸಾಕಾಗುತ್ತದೆ. ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ 5 ಲಕ್ಷ ಜನಕ್ಕೆ ಉದ್ಯೋಗ ಒದಗುತ್ತದೆ. 100 ಕೋಟಿ ಘನ ಅಡಿ ಮರ ಬೆಳೆಸುವುದರಿಂದ 10 ವರ್ಷದಲ್ಲಿ ರೈತರಿಗೆ 50,000/– ಕೋಟಿ ಹಣ ಬರುತ್ತದೆ. ಮರದ ರೆಂಬೆ–ಕೊಂಬೆ ಬುಡವನ್ನು ಉರುವಲಾಗಿ ಉಪಯೋಗಿಸಬಹುದು. ಮೇಲಿನ ಮರದಿಂದ ಪ್ಲೈವುಡ್ ತಯಾರಿಸಿದರೆ, 100% ಮೌಲ್ಯವರ್ಧನೆ ಆಗುತ್ತದೆ. ಇದರಿಂದ ಇಂಡಸ್ಟ್ರಿಯಲ್ ಟರ್ನ್‌ವೋವರ್ ಆಗುತ್ತದೆ. ಸರ್ಕಾರಕ್ಕೆ 1,200/– ಕೋಟಿ ರೆವಿನ್ಯೂ ಬರುವ ಅಂದಾಜು ಇದೆ. ಈ ಅದ್ಭುತ ಕ್ರಾಂತಿಯಾಗಬೇಕಾದರೆ ಸರ್ಕಾರ, ಅರಣ್ಯ ಇಲಾಖೆ ಮತ್ತು ಸಾರ್ವಜನಿಕರ ಸಹಭಾಗಿತ್ವದಿಂದ ಉತ್ತಮ ಗುಣಮಟ್ಟದ ಸಸಿಗಳನ್ನು ಉತ್ಪಾದನೆ ಮಾಡಿ ಎಲ್ಲ ಕಡೆ ರೈತರಿಗೆ ಸುಲಭವಾಗಿ ಕೈಗೆಟುಕುವ ಬೆಲೆಯಲ್ಲಿ ಸಿಗುವಂತೆ ಮಾಡಬೇಕು.

ಹೆಬ್ಬೇವನ್ನು ಪೂರ್ತಿ ಹೊಲದಲ್ಲಿ ಹಾಗೂ ಹೊಲದಂಚಿನ ಬದುಗಳ ಮೇಲೆ ಬೆಳೆಸಲು ನಮ್ಮ ರೈತರಿಗೆ ತರಬೇತಿ ಕೊಡಬೇಕು. ಸಮರೋಪಾದಿಯಲ್ಲಿ ಸರ್ಕಾರ ಮತ್ತು ಸಂಘ ಸಂಸ್ಥೆಗಳು ಕೆಲಸ ಮಾಡಬೇಕು. ಮರ ಗಿಡ ಬೆಳೆಸುವ ರೈತರಿಗೆ ಬೋರ್ ಕೊರೆಸಲು, ತಂತಿಬೇಲಿ ಕಟ್ಟಲು, ಗುಂಡಿ ತೆಗೆದು ಗಿಡ ನೆಡಲು ಬ್ಯಾಂಕ್‌ಗಳಿಂದ ಸಾಲ ಸೌಲಭ್ಯ ಕೊಡಬೇಕು. ಹನಿ ನೀರಾವರಿಗೆ ಸಹಾಯ ಧನ ಕೊಡಬೇಕು. ಮರ ಕಡಿದು ಸಾಗಣೆ ಮಾಡಲು ಇರುವ ಅರಣ್ಯ ಇಲಾಖೆಯ ಕಾನೂನಿನ ತೊಡಕನ್ನು ನಿವಾರಿಸಬೇಕು. ನಿರುಪಯುಕ್ತವಾಗಿರುವ ಜಮೀನನ್ನು ಕಾಡು ಬೆಳೆಸಲು ಗುತ್ತಿಗೆ ಆಧಾರದಲ್ಲಿ ಜಮೀನಿಲ್ಲದ ರೈತರಿಗೆ ಕೊಡಬೇಕು. ಈ ವೃಕ್ಷ ಕ್ರಾಂತಿಯು ಹರಿಯಾಣ, ಪಂಜಾಬ್, ಉತ್ತರಾಂಚಲ, ಉತ್ತರ ಪ್ರದೇಶ ರಾಜ್ಯದ ಚಹರೆಯನ್ನು ಬದಲಾಯಿಸಿದೆ. ನಿಖರ ಆದಾಯ ಖಾತರಿಗಾಗಿ, ಅತಿವೇಗವಾಗಿ ಬೆಳೆಯುವ ದೇಶಿಯ ತಳಿ, ಕೈಗಾರಿಕೆಗಳಿಗೆ ಬೇಕಾಗುವ ಉತ್ತಮ ಮರ, ರಾಷ್ಟ್ರೀಯ ಪ್ರಾಮುಖ್ಯತೆಯ ತ್ವರಿತ ಹಸಿರೀಕರಣಕ್ಕಾಗಿ, ಇರುವ ಕಾಡಿನ ಮೇಲಿನ ಒತ್ತಡವನ್ನು ಕಡಿಮೆ ಮಾಡಲು ಅಥವಾ ಜೀವ ವೈವಿಧ್ಯತೆ ಕಾಪಾಡಲು, ಕುರಿ, ಮೇಕೆ, ದನಗಳನ್ನು ಸಾಕಿ ಹಳ್ಳಿಗಳಲ್ಲಿ ಇಂದಿನ ಯುವಕರು ಉಳಿದು ಗ್ರಾಮಾಂತರ ಆರ್ಥಿಕ ಸಬಲೀಕರಣಕ್ಕಾಗಿ ಬೀಜಗಳಿಂದ ಎಣ್ಣೆ ತೆಗೆದು ಬಯೋಡೀಸೆಲ್, ಬಯೋಪೆಸ್ಟಿಸೈಡ್ ತಯಾರಿಸಲು, ಎಲ್ಲಕ್ಕಿಂತ ಮುಖ್ಯವಾಗಿ ಜಾಗತಿಕ ತಾಪಮಾನ ತಗ್ಗಿಸಲು ಪರಿಸರ ಸಮತೋಲನ ಕಾಪಾಡಲು, ಈ ಮರ ಬೆಳೆಯಬೇಕಾಗಿದೆ. ಈ ಮರವನ್ನು ಪ್ಲೈವುಡ್ ತಯಾರಿಕೆ, ವಿನಿಯರ್ ತಯಾರಿಕೆ, ಬೆಂಕಿಪೊಟ್ಟಣ, ಪೆನ್ಸಿಲ್ ತಯಾರಿಕೆ, ಪ್ಯಾಕಿಂಗ್ ಬಾಕ್ಸ್ ತಯಾರಿಸಲು, ದೋಣಿ ತಯಾರಿಸಲು, ಸಂಗೀತ ಉಪಕರಣ ತಯಾರಿಸಲು, ಮನೆಯ ಒಳಾಂಗಣ ಸೌಂದರ್ಯ ವರ್ಧಿಸಲು ಈ ಮರ ಬಳಸುತ್ತಾರೆ. ಹೆಂಚು ಮತ್ತು ಶೀಟುಗಳನ್ನು ಹಾಕಲು ಹಾಗೂ ಕಟ್ಟಡದ ಉದ್ದೇಶಕ್ಕೂ ಸಹ ಈ ಮರ ಬಳಕೆ–ಯಾಗುತ್ತದೆ. ಡಿಸೆಂಬರ್, ಜನವರಿ, ಫೆಬ್ರವರಿಯಲ್ಲಿ ಮರದ ಎಲ್ಲಾ ಎಲೆಗಳು ಪೂರ್ತಿ ಉದುರುತ್ತವೆ. ಹೊಸ ಚಿಗುರು ಮತ್ತು ಹೂವು ಮಾರ್ಚಿ ನಂತರ ಬಂದು ಅಕ್ಟೋಬರ್‌ನಿಂದ ಜನವರಿ ಒಳಗೆ ಹಣ್ಣು ಮಾಗಿ ಉದುರುತ್ತದೆ. ಮರಗಳ ಬೆಳವಣಿಗೆ ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸವಾಗುತ್ತದೆ. ಮಣ್ಣು ಫಲವತ್ತಾಗಿದ್ದು, ಹೆಚ್ಚು ಮಳೆ ಬೀಳುವ ಸ್ಥಳದಲ್ಲಿ ಎತ್ತರ ಮತ್ತು ದಪ್ಪ ಬೇಗ ಬರುತ್ತದೆ. 8 ರಿಂದ 10 ವರ್ಷದ ಒಂದು ಸಾದಾರಣ ಮರದಿಂದ 20–25 ಘನ ಅಡಿ ಮರ ನಿರೀಕ್ಷಿಸಬಹುದಾಗಿದೆ. ಒಂದು ಮರಕ್ಕೆ 8–10 ಸಾವಿರ ರೂಪಾಯಿ ಆದಾಯ ಬಂದು ಕೊನೆ ಪಕ್ಷ ಒಂದು ಎಕರೆಗೆ 20 ರಿಂದ 25 ಲಕ್ಷ ರೂಪಾಯಿ ಆದಾಯವನ್ನು ನಿರೀಕ್ಷಿಸಬಹುದು. ಬೇವು, ತೇಗ, ಮಹಾಗನಿ, ಶ್ರೀಗಂಧ ಮುಂತಾದ ಮರಗಳು ನಿಧಾನಗತಿಯಲ್ಲಿ ಬೆಳೆಯುವ ಮರಗಳು. ಹಾಗೆಯೇ ಸಿಲ್ವರ್ ಓಕ್, ಐಲ್ಯಂತಿಸ್, ಎಕ್ಸೇಲ್‌ಸಾ ಮತ್ತು ಹೆಬ್ಬೇವು, ಚುರುಕುಗತಿಯ ಬೆಳವಣಿಗೆಯ ಮರಗಳಲ್ಲಿಯೂ, ಹೆಬ್ಬೇವು ಮರ ಹೆಚ್ಚಿನ ಆದಾಯ ತರುವ ಒಂದು ಅದ್ಭುತ ಪವಾಡ ಸದೃಶ ಮರವಾಗಿದೆ. ಇದು ನನ್ನ ಕನಸು ಎಲ್ಲರೂ ಕೈ ಜೋಡಿಸಿ ಇದನ್ನು ಸಾಕಾರಗೊಳಿಸೋಣ.

**ಜೈ ಜವಾನ್ ಜೈ ಕಿಸಾನ್** ■

# ಕೃಷಿ ಅರಣ್ಯದ ಉತ್ತೇಜನಕ್ಕಿರುವ ಕಾನೂನಿನ ಅಡಚಣೆಗಳು

✍ **ಶ್ರೀ ದೀಪಕ್ ಶರ್ಮ,** ಭಾ.ಅ.ಸೇ.(ನಿವೃತ್ತ), ಮೊ: 99862 32094, **ಶ್ರೀ ಹೆಚ್.ಜಿ. ಶಿವಾನಂದಮೂರ್ತಿ,** ಭಾ.ಅ.ಸೇ.(ನಿವೃತ್ತ), ಮೊ.: 94481 26246

ಕೃಷಿ ಅರಣ್ಯವು ಮೂಲತಃ ರೈತರಿಂದಲೇ ಅನುಷ್ಠಾನಗೊಳ್ಳುವ ಚಟುವಟಿಕೆ. ಮರಗಳನ್ನು ಬೆಳೆಸಬೇಕೆನ್ನುವ ಪ್ರವೃತ್ತಿ ಮೊದಲು ರೈತರಲ್ಲೇ ಮೂಡಬೇಕಿದೆ. ಈ ನಿಟ್ಟಿನಲ್ಲಿ ಯಾವ ಜಾತಿಯ ಮರಗಳನ್ನು ಎಷ್ಟು ಭೂಮಿಯಲ್ಲಿ ಬೆಳೆಸಬೇಕೆನ್ನುವ ತೀರ್ಮಾನ ರೈತರದ್ದೇ ಆಗಿದೆ. ಅನೇಕ ಸರ್ಕಾರದ ಇಲಾಖೆಗಳು ಕೃಷಿ ಅರಣ್ಯ ಬೆಳೆಸಲು ಪ್ರೋತ್ಸಾಹಿಸುತ್ತಿವೆ. ಅವುಗಳೆಂದರೆ ಅರಣ್ಯ, ಕೃಷಿ, ತೋಟಗಾರಿಕೆ ಮತ್ತು ಜಲಾನಯನ ಇಲಾಖೆಗಳು. ಈ ಇಲಾಖೆಗಳು ರೈತರಲ್ಲಿ ಕೃಷಿ ಅರಣ್ಯ ಬೆಳಸಲು ಜಾಗೃತಿ ಮೂಡಿಸುವುದು. ತಾಂತ್ರಿಕ ಸಲಹೆಗಳನ್ನು ಕೃಷಿ ಅರಣ್ಯದ ಬಗ್ಗೆ ತಿಳಿಸಿ ಹೇಳುವುದು, ಜೊತೆಗೆ ರೈತರಿಗೆ ಬೇಕಾದ ಸಸಿಗಳನ್ನು ಸಹ ಪೂರೈಕೆ ಮಾಡಲಾಗುತ್ತಿದೆ. ಈ ಎಲ್ಲಾ ಇಲಾಖೆಗಳು ಮೂಲತಃ ಕೃಷಿ ಅರಣ್ಯದ ಪ್ರೇರಕರಾಗಿ ಕೃಷಿ ಅರಣ್ಯವನ್ನು ಜನಸಾಮಾನ್ಯರು ಅನುಷ್ಠಾನಗೊಳಿಸಲು ಪ್ರೋತ್ಸಾಹಿಸಲಾಗುತ್ತಿದೆ.

ಬೆಳೆಸಿರುವ ಮರಗಳನ್ನು ಕಟಾವು ಮಾಡಲು ಅನುಮತಿ ನೀಡುವುದು ಅರಣ್ಯ ಇಲಾಖೆಯ ಜವಾಬ್ದಾರಿಯಾಗಿರುವುದು. ಜೊತೆಗೆ ಕಟಾವು ಮಾಡಿರುವ ಉರುವಲು, ಕಟ್ಟಿಗೆ, ಪೋಲ್ಸ್, ಪಲ್ಪ್‌ವುಡ್ ಮತ್ತು ಮರದ ದಿಮ್ಮಿಗಳ ಸಾಗಾಣಿಕೆಗೆ ರಹದಾರಿ ನೀಡುವುದು ಸಹ ಇಲಾಖೆಯ ಜವಾಬ್ದಾರಿಯಾಗಿದೆ. ಖಾಸಗಿ ಜಮೀನುಗಳಲ್ಲಿ ಮರ ಕಟಾವು ಮಾಡಲು ಇರುವ ಇಲಾಖೆಯ ಕಾನೂನಿನ ಅಡಚಣೆಗಳು ರೈತರನ್ನು ನಿರುತ್ಸಾಹಗೊಳಿಸುವಂತಿದೆ. ಇದನ್ನು ಮನಗಂಡ ಇಲಾಖೆಯು ಅನೇಕ ಜಾತಿಯ ಮರಗಳ ಕಟಾವಣೆಗೆ ಇಲಾಖೆಯ ಅನುಮತಿಯಿಂದ ವಿನಾಯಿತಿ ನೀಡಿದೆ. ಇದೇ ರೀತಿಯಲ್ಲಿ ಅನೇಕ ಜಾತಿಯ ಮರಗಳ ಸಾಗಾಣಿಕೆಗೆ ಸಹ ಇಲಾಖೆಯ ಅನುಮತಿ ಬೇಕಾಗಿರುವುದಿಲ್ಲ. ಇಲ್ಲಿ ಕೆಲವೇ ಜಾತಿಯ ಮರಗಳಿಗೆ ಮರ ಕಟಾವಣೆ ಮಾಡಲು ಮತ್ತು ಸಾಗಾಣಿಕೆ ಮಾಡಲು ವಿನಾಯತಿ ನೀಡಿದೆ. ಅವುಗಳೆಂದರೆ ಹೆಬ್ಬೇವು ಮತ್ತು ಸಿಲ್ವರ್ ಓಕ್. ಆದ್ದರಿಂದ ಇವೆರಡೂ ಕೃಷಿ ಅರಣ್ಯದಲ್ಲಿ ಬೆಳೆಸುತ್ತಿರುವ ಹೆಸರುವಾಸಿಯಾದ ಮರಗಳಾಗಿವೆ. ಇದನ್ನು ಗಮನಿಸಿದಾಗ ಕಂಡುಬರುವ ಅಂಶವೆಂದರೆ, ಕೃಷಿ ಅರಣ್ಯದ ಪ್ರೋತ್ಸಾಹಕ್ಕೆ ಮುಖ್ಯವಾಗಿ ಇರುವ ಕಾನೂನಿನ ಅಡಚಣೆಗಳನ್ನು ನಿವಾರಿಸಬೇಕಿದೆ. ಆದ್ದರಿಂದ ಈಗಿರುವ ಕಾನೂನಿನ ಅಡಚಣೆಗಳನ್ನು ಯಾವ ರೀತಿಯಲ್ಲಿ ಸರಳೀಕರಣಗೊಳಿಸಬೇಕು ಎನ್ನುವ ನಿಟ್ಟಿನಲ್ಲಿ ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕಿದೆ. ಇದರಿಂದ ರಾಜ್ಯದಲ್ಲಿ ರೈತರು ಹೆಚ್ಚು ಹೆಚ್ಚು ಕೃಷಿ ಅರಣ್ಯ ಬೆಳೆಸಲು ಪ್ರೇರೇಪಿಸಲು ಸಾಧ್ಯವಾಗುವುದು. ಈ ನಿಟ್ಟಿನಲ್ಲಿ ರಾಷ್ಟ್ರೀಯ ಕೃಷಿ ಅರಣ್ಯ ನೀತಿ–2014ನ್ನು ಸ್ಮರಿಸಬೇಕಿದೆ. ಆದ್ದರಿಂದ ಜಮೀನುಗಳಲ್ಲಿ ಮರ ಬೆಳೆಸುವಂತೆ ಪ್ರೋತ್ಸಾಹಿಸಲು ಈಗಿರುವ ಕಾನೂನುಗಳನ್ನು ಸರಳೀಕರಣಗೊಳಿಸುವುದೊಂದೇ ಇದಕ್ಕೆ ದಾರಿಯಾಗಿದೆ. ಹಾಗೂ ಯಾವುದೇ ಅಡಚಣೆಗಳಿಲ್ಲದೆ ಅನುಮತಿಯನ್ನು ಪಾರದರ್ಶಕವಾಗಿ ಸಮಯದ ಮಿತಿಯೊಂದಿಗೆ ನೀಡುವಂತಾಗಬೇಕಿದೆ.

ಕರ್ನಾಟಕ ಮರಗಳ ಸಂರಕ್ಷಣಾ ಕಾಯ್ದೆ 1976ರ ಗುರಿಯು ಖಾಸಗೀ ಭೂಮಿಯಲ್ಲಿಯ ಮರಗಳ ಕಟಾವನ್ನು ನಿಯಂತ್ರಿಸುವುದಾಗಿದೆ. ನಂತರದಲ್ಲಿ ತಿಳಿದು ಬಂದಿದ್ದೇನೆಂದರೆ ಈ ರೀತಿಯ ನಿಯಂತ್ರಣವು ಜನರು ಖಾಸಗೀ ಜಮೀನಿನಲ್ಲಿ ಹೆಚ್ಚು ಹೆಚ್ಚು ಮರ ಬೆಳೆಸುವುದನ್ನು ನಿರುತ್ಸಾಹಗೊಳಿಸಲಿದೆಯೆಂದು. ಏಕೆಂದರೆ ಮರಗಳ ಕಟಾವಿಗೆ ಕಾನೂನಿನ್ವಯ ಅನುಮತಿ ಪಡೆಯುವುದು ಕ್ಲಿಷ್ಟಕರವಾಗಿದ್ದು ಮತ್ತು ಹೆಚ್ಚು ಸಮಯ ತೆಗೆದುಕೊಳ್ಳಲಿದೆ. ಜನರು ಖಾಸಗೀ ಜಮೀನುಗಳಲ್ಲಿ ಮರ ಬೆಳೆಸಲು ಅನುಕೂಲವಾಗುವಂತೆ ಮಾಡಲು, ಕಾನೂನನ್ನು ಅನೇಕ ಬಾರಿ ತಿದ್ದುಪಡಿಯೊಂದಿಗೆ ಕೆಲವು ಜಾತಿಯ ಮರಗಳಿಗೆ ಕಾನೂನಿನಡಿ ಮರ ಕಟಾವು ಮಾಡಲು ಪೂರ್ವಾನುಮತಿಯ ಅವಶ್ಯಕತೆಯಿಲ್ಲವೆಂದು ತಿಳಿಸಲಾಗಿದೆ. ಪ್ರಸ್ತುತದಲ್ಲಿ ಸುಮಾರು 27 ಜಾತಿಯ ಮರಗಳ ಕಟಾವಿಗೆ ಕರ್ನಾಟಕ ಮರಗಳ ಸಂರಕ್ಷಣಾ ಕಾಯ್ದೆ 1976ರನ್ವಯ ಯಾವುದೇ ಅನುಮತಿ ಬೇಕಾಗಿರುವುದಿಲ್ಲ. ಅರಣ್ಯ ಉತ್ಪನ್ನಗಳ ಸಾಗಾಣಿಕೆಯು ಕರ್ನಾಟಕ ಅರಣ್ಯ ನಿಯಮ 1969ರ ನಿಯಮ 144, 145, ಮತ್ತು 146 ರನ್ವಯ ಸಾಗಾಣಿಕೆಗೆ ಅಧಿಕಾರಯುತ ಅಧಿಕಾರಿ ನೀಡಿರುವ ರಹದಾರಿ ಅವಶ್ಯಕತೆಯಿದ್ದು, ಸಾಗಾಣಿಕೆಯ ಸಮಯದಲ್ಲಿ ಜೊತೆಯಲ್ಲಿರಬೇಕೆಂದಿದೆ. ರೈತರು ಖಾಸಗೀ ಜಮೀನುಗಳಲ್ಲಿ ಬೆಳೆದ ಮರದ ಉತ್ಪನ್ನಗಳಾದ ಮರದ ದಿಮ್ಮಿ/ಪೋಲ್ಸ್/ಪಲ್ಪ್‌ವುಡ್ ಮತ್ತು ಉರುವಲು ಕಟ್ಟಿಗೆಯ ಕಟಾವು ಮಾಡಿದ ನಂತರ ಅಲ್ಲಿಂದ ಬೇರೆಡೆಗೆ ಸಾಗಾಣಿಕೆ ಮಾಡಲು ಯಾವುದೇ ಸಮಸ್ಯೆಯಾಗಬಾರದೆಂದು ಕರ್ನಾಟಕ ಅರಣ್ಯ ನಿಯಮ 1976ರ ನಿಯಮ 144ನ್ನು ಅನುಸರಿಸಿ ಸರ್ಕಾರದ ಕೆಲವು ಜಾತಿಯ ಮರಗಳಿಗೆ ಸಾಗಾಣಿಕೆ ನಿಯಮದಿಂದ ವಿನಾಯತಿ ನೀಡಿದೆ. ಪ್ರಸ್ತುತದಲ್ಲಿ 42 ಜಾತಿಯ ಮರಗಳಲ್ಲಿ 21 ಜಾತಿಯ ಮರಗಳಿಗೆ ಯಾವುದೇ ಕಟಾವಣೆ ಆದೇಶ ಬೇಕಾಗಿರುವುದಿಲ್ಲ. ಅನೇಕ ಜಾತಿಯ ಮರಗಳ ಕಟಾವಣೆಗೆ ಯಾವುದೇ ಆದೇಶ ಹಾಗೂ ಸಾಗಾಣಿಕೆ ರಹದಾರಿ ಅವಶ್ಯಕತೆಯಿರುವುದಿಲ್ಲ.

ಇಲ್ಲಿ ಸ್ಪಷ್ಟವಾಗಿ ಹೇಳುವುದಾದರೆ, ಕರ್ನಾಟಕ ಮರಗಳ ಸಂರಕ್ಷಣಾ ಕಾಯ್ದೆ 1976 ರನ್ವಯ ಮರಗಳ ಕಟಾವಣೆಗೆ ಸೆಕ್ಷನ್ 8ರಡಿ ರಾಜ್ಯದ ಮಲೆನಾಡು ಪ್ರಾಂತ್ಯದಲ್ಲಿ ಪೂರ್ವಾನುಮತಿ ಅವಶ್ಯಕತೆಯಿದೆ. ಅರೆ ಮಲೆನಾಡು ಮತ್ತು ಮೈದಾನ ಪ್ರದೇಶಗಳಲ್ಲಿ ಕಟಾವಣೆಗೆ ಪೂರ್ವಾನುಮತಿಯ ಅವಶ್ಯಕತೆಯಿರುವುದಿಲ್ಲ. ಆದರೆ ಸಾಗಾಣಿಕೆಗೆ ರಹದಾರಿಯು (ಪರ್ಮಿಟ್) ಕಡ್ಡಾಯವಾಗಿ ರಾಜ್ಯದ ಎಲ್ಲಾ ಕಡೆ ಬೇಕಾಗಿರುತ್ತದೆ. 42 ಜಾತಿಯ ಮರಗಳ ಸಾಗಾಣಿಕೆಗೆ ರಹದಾರಿಯ ಅವಶ್ಯಕತೆಯಿರುವುದಿಲ್ಲ. ಕೆಲವು ಜಾತಿಯ ಮರಗಳಾದ ಸಿಲ್ವರ್ ಓಕ್ ಮತ್ತು ಹೆಬ್ಬೇವಿನ ಮರಗಳು ಒಣ ಭೂಮಿ ಪ್ರದೇಶದಲ್ಲಿ ಪ್ರಸಿದ್ಧಿಯಾಗಿವೆ. ನೀಲಗಿರಿ ಮರ ಮತ್ತೊಂದು ಹೆಸರುವಾಸಿಯಾದ ಮರ (ಯೂಕಲಿಪ್ಟಸ್). ಆದರೆ ಇದನ್ನು ಬೆಳೆಸದಂತೆ ನಿರ್ಬಂಧಿಸಲಾಗಿದೆ. ಈಗ ವಿನಾಯತಿ ನೀಡಿರುವ 42 ಜಾತಿಯ ಮರಗಳಲ್ಲಿ ಹೆಬ್ಬೇವು, ಸಿಲ್ವರ್ ಓಕ್ ಮತ್ತು ನೀಲಗಿರಿ ಮರಗಳನ್ನು ಹೊರತುಪಡಿಸಿದಲ್ಲಿ, ಬಾಕಿ ಇರುವ ಜಾತಿಯ ಮರಗಳು ಅಷ್ಟೇನು ಆರ್ಥಿಕವಾಗಿ ಹೆಚ್ಚು ಆಕರ್ಷಕವಾಗಿಲ್ಲ ಮತ್ತು ಕಟಾವು ಮಾಡಿದ ಉತ್ಪನ್ನಗಳಿಗೆ ಹೆಚ್ಚು ಬೆಲೆಯುರುವುದಿಲ್ಲ. ಇಲ್ಲಿ ಹೆಚ್ಚಿನ ಮರದ ಉತ್ಪನ್ನಗಳು ಉರುವಲು ಕಟ್ಟಿಗೆಯಾಗಿ ಮನೆಗಳಲ್ಲಿ ಬಳಸಲಾಗುತ್ತದೆ.

ಅನೇಕ ಮರಗಳ ಕಟಾವಣೆಗೆ ಮತ್ತು ಸಾಗಾಣಿಕೆಗೆ ಯಾವುದೇ ವಿನಾಯತಿ ನೀಡದೆ ಇರುವ ಮುಖ್ಯ ಕಾರಣವೆಂದರೆ, ವಿವಿಧ ಜಾತಿಯ ಮರಗಳು ನೈಸರ್ಗಿಕ ಅರಣ್ಯದಲ್ಲಿ ಅಂದರೆ ಸರ್ಕಾರಿ ಅರಣ್ಯ ಭೂಮಿಯಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತಿರುವುದರಿಂದ. ಕರ್ನಾಟಕ ಮರಗಳ ಸಂರಕ್ಷಣಾ ಕಾಯ್ದೆ 1976ರನ್ನು ಶಾಸನವಾಗಿ ತಂದಿರುವುದು ಮೂಲತಃ ಖಾಸಗೀ ಜಮೀನುಗಳಲ್ಲಿ ಮರಗಳ ಸಂರಕ್ಷಣೆ ಮತ್ತು ನಿಯಂತ್ರಣಕ್ಕಾಗಿದೆ. ಅರಣ್ಯ ಇಲಾಖೆಯು ಈ ಒಂದು ಅಸ್ತ್ರವನ್ನು ಸರ್ಕಾರದ ಭೂಮಿಯಲ್ಲಿರುವ ಮರಗಳ ರಕ್ಷಣೆಗೆ ಬಳಸಿಕೊಳ್ಳುತ್ತಿದ್ದಾರೆ. ಇದೊಂದೇ ಶಾಸನವಲ್ಲದೆ ಇತರೆ ಕಾನೂನುಗಳು ಮತ್ತು ನಿಯಮಗಳು ಸರ್ಕಾರದ ಅರಣ್ಯ ಪ್ರದೇಶದಲ್ಲಿರುವ ಮರಗಳ ರಕ್ಷಣೆಗೆ ಮತ್ತು ನಿಯಂತ್ರಣಕ್ಕಾಗಿ ಅಸ್ತಿತ್ವದಲ್ಲಿವೆ.

ರಾಜ್ಯದ ಮಲೆನಾಡು ಪ್ರದೇಶದಲ್ಲಿ ಅರಣ್ಯ ಉತ್ಪನ್ನಗಳ ಸಾಗಾಣಿಕೆಯನ್ನು ನಿಯಂತ್ರಿಸುವ ಅವಶ್ಯಕತೆಯಿದೆ. ಕಾರಣ ಬಹಳಷ್ಟು ಸರ್ಕಾರದ ಅರಣ್ಯ ಪ್ರದೇಶಗಳು ಮತ್ತು ಬೆಲೆ ಬಾಳುವ ಜಾತಿಯ ಮರಗಳು ಮಲೆನಾಡು ಪ್ರದೇಶದಲ್ಲಿರುವುದರಿಂದ. ಆದರೆ ರಾಜ್ಯದ ಇತರೆ ಭಾಗಗಳಲ್ಲಿ ಕಡಿಮೆ ಅರಣ್ಯ ಪ್ರದೇಶ/ಸರ್ಕಾರದ ಅರಣ್ಯಗಳಿದ್ದರೂ ಬೆಲೆ ಬಾಳುವ ಜಾತಿಯ ಮರಗಳು ಕಡಿಮೆ ಪ್ರಮಾಣದಲ್ಲಿವೆ. ಈ ಪ್ರದೇಶದಲ್ಲಿ ಮರಗಳ ಕಟಾವಿಗೆ ಕರ್ನಾಟಕ ಮರಗಳ ಸಂರಕ್ಷಣಾ ಕಾಯ್ದೆಯಡಿ ವಿನಾಯ್ತಿ ನೀಡಿರುವುದರಿಂದ, ಸಾಗಾಣಿಕೆ ನಿಯಮಗಳಿಗೂ ಸಹ ಬಹಳ ಸರಳವಾದ ವಿಧಾನವನ್ನು ಅನುಸರಿಸುವ ಅವಶ್ಯಕತೆಯಿದೆ. ಖಾಸಗಿ ಜಮೀನುಗಳಲ್ಲಿಯ ಮರಗಳ ಕಟಾವಣೆಗೆ ಮತ್ತು ಸಾಗಾಣಿಕೆಗೆ ಇರುವ ಕಾನೂನುಗಳನ್ನು ಸರಳೀಕೃತಗೊಳಿಸಿ ರೈತರು ಖಾಸಗೀ ಜಮೀನುಗಳಲ್ಲಿ ಬೆಳೆದ ಮರಗಳ ಉತ್ಪನ್ನಗಳ ಸಾಗಾಣಿಕೆಗೆ ಅನುವು ಮಾಡಿಕೊಡುವ ಅವಶ್ಯಕತೆಯಿದೆ. ■

**ಕರ್ನಾಟಕ**
**ವೃಕ್ಷ ಸಂರಕ್ಷಣಾ**
**ಕಾಯ್ದೆ 1976**

(ಕನಾಟಕ ಅಧಿನಿಯಮ ಸಂಖ್ಯೆ 76/1976)

# ಕೃಷಿಅರಣ್ಯ ಉತ್ಪನ್ನಗಳ ಮಾರಾಟ

✍ **ಶ್ರೀ ದೀಪಕ್ ಶರ್ಮ**, ಭಾ.ಅ.ಸೇ.(ನಿವೃತ್ತ), ಮೊ: 99862 32094, **ಶ್ರೀ ಹೆಚ್.ಜಿ. ಶಿವಾನಂದಮೂರ್ತಿ**, ಭಾ.ಅ.ಸೇ.(ನಿವೃತ್ತ), ಮೊ: 94481 26246

ಕೃಷಿ ಅರಣ್ಯ ಪದ್ಧತಿಯು ಸುಸ್ಥಿರವಾಗಿರಲು, ಕೃಷಿ ಅರಣ್ಯ ಉತ್ಪನ್ನಗಳಿಗೆ ವ್ಯವಸ್ಥಿತವಾದ ಮಾರುಕಟ್ಟೆ ಸೌಲಭ್ಯವಿರಬೇಕು. ಕೃಷಿ ಅರಣ್ಯ ಪದ್ಧತಿಯಿಂದ ಈಗಿರುವ ರೈತರ ಜೀವನಮಟ್ಟದಲ್ಲಿ ಕಣ್ಣಿಗೆ ಕಾಣುವಂತಹ ಸುಧಾರಣೆಯಾಗಬೇಕು ಮತ್ತು ಆರ್ಥಿಕ ಪರಿಸ್ಥಿತಿ ಸುಧಾರಿಸಲು ಕೃಷಿ ಅರಣ್ಯ ಉತ್ಪನ್ನಗಳಿಗೆ ಬೇಡಿಕೆ ಮತ್ತು ತಕ್ಷಣವೇ ಮಾರುಕಟ್ಟೆ ದೊರೆಯಬೇಕಿದೆ. ಕೃಷಿ ಅರಣ್ಯ ಉತ್ಪನ್ನಗಳಿಗೆ ಪೂರಕ ಮಾರುಕಟ್ಟೆಯಿಲ್ಲದಿದ್ದಲ್ಲಿ, ಇದೊಂದು ರೀತಿಯಲ್ಲಿ ಕೃಷಿ ಅರಣ್ಯದ ಪ್ರೋತ್ಸಾಹಕ್ಕೆ ಅಡಚಣೆಯುಂಟಾಗುವುದು. ಕೆಲವೊಂದು ಬಾರಿ ಕೃಷಿ ಅರಣ್ಯದ ಉತ್ಪನ್ನಗಳನ್ನು ಮಾರಾಟ ಮಾಡುವುದು, ಅವುಗಳನ್ನು ಬೆಳೆಸುವುದಕ್ಕಿಂತಲೂ ಹೆಚ್ಚಿನ ಸವಾಲಾಗುತ್ತದೆ.

ಕೃಷಿ ಅರಣ್ಯದಲ್ಲಿ ಮರಗಳ (ದಿಮ್ಮಿಗಳ), ಮಾರಾಟಕ್ಕಿಂತಲೂ, ಅವುಗಳ ಉತ್ಪನ್ನಗಳಾದ ಹಣ್ಣು, ಬೀಜ, ಕಾಯಿ ಮುಂತಾದವುಗಳ ಮಾರಾಟಕ್ಕೆ ಸಮಸ್ಯೆಯಿರುವುದಿಲ್ಲ. ಏಕೆಂದರೆ ಈಗಾಗಲೇ ಇರುವ ಮಾರುಕಟ್ಟೆ ವ್ಯವಸ್ಥೆಯಾದ ಇ-ಮಾರ್ಕೆಟಿಂಗ್, ಕೃಷಿ ಮಾರುಕಟ್ಟೆ, ರೈತ ಉತ್ಪನ್ನಗಳ ಸಂಘಗಳು (FPO), ವಿವಿಧ ಇಲಾಖೆಗಳಾದ ಕೃಷಿ ಇಲಾಖೆ, ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಇಲಾಖೆಗಳು ರಚಿಸಿರುವುದರಿಂದ ರೈತರು ಅನುಕೂಲಗಳನ್ನು ಪಡೆಯಬಹುದಾಗಿದೆ. ಆದರೆ ಮರಗಳ ಉತ್ಪನ್ನಗಳ ಮಾರಾಟ ಸವಾಲಾಗಿ ಪರಿಣಮಿಸಿದೆ. ಕೆಲವೊಂದು ಸಂದರ್ಭಗಳಲ್ಲಿ ಕಾಡಿಸುವಂತಾಗಿದೆ. ಈ ಹಿಂದಿನ ಲೇಖನದಲ್ಲಿ ರೈತರು ಸಾಗಾಣಿಕೆ ಪರವಾನಗಿ ಪಡೆಯುವಲ್ಲಿಯ ಸಮಸ್ಯೆಗಳ ಬಗ್ಗೆ ತಿಳಿಸಲಾಗಿತ್ತು. ಕೆಲವೊಂದು ಜಾತಿಯ ಮರಗಳ ಕಟಾವಣೆಗೆ ಮತ್ತು ಸಾಗಾಣಿಕೆಗೆ ರಹದಾರಿಯ ಅವಶ್ಯಕತೆಯಿರುವುದಿಲ್ಲ. ಆದರೆ ಕೆಲವು ಜಾತಿಯ ಮರಗಳ ಕಟಾವಣೆಗೆ ಇಲಾಖೆಯ ಪೂರ್ವಾನುಮತಿ ಮತ್ತು ಸಾಗಾಣಿಕೆಗೆ, ರಹದಾರಿಯು ಕಡ್ಡಾಯವಾಗಿ ಬೇಕಾಗಿರುವುದು. ಇಲಾಖೆಯಿಂದ ಅನುಮತಿ ಪಡೆಯುವುದು ಸುಲಭವಾದ ಕಾರ್ಯವಾಗಿರುವುದಿಲ್ಲ ಹಾಗೂ ಬಹಳ ಸಮಯ ತೆಗೆದುಕೊಳ್ಳುವುದು. ಆದುದರಿಂದ ರೈತರು ನೇರವಾಗಿ ಇಲಾಖೆಯನ್ನು ಸಂಪರ್ಕಿಸುವುದು ಕಷ್ಟದ ಕೆಲಸವಾಗಿರುವುದರಿಂದ ಮಧ್ಯವರ್ತಿಗಳ ಮುಖಾಂತರ ಇಲಾಖೆಯನ್ನು ಸಂಪರ್ಕಿಸಲು ಇಚ್ಛಿಸುವರು. ಇವರುಗಳನ್ನು 'ಮಾಲ್ಕಿ ಗುತ್ತಿಗೆದಾರ'ರೆಂದು ಕರೆಯಲಾಗುವುದು. ಇವರುಗಳು ಮಾಲ್ಕಿ ಪ್ರಕರಣಗಳನ್ನು ನೋಡಿಕೊಳ್ಳುವರು. ಈ ಮಧ್ಯವರ್ತಿಗಳು ಇಂತಹ ಪ್ರಕರಣಗಳಲ್ಲಿ ಹೆಚ್ಚಿನ ಹಣವನ್ನು ಪಡೆದುಕೊಳ್ಳುವರು. ಆದ್ದರಿಂದ ರೈತರಿಗೆ ಕಡಿಮೆ ಹಣ ದೊರೆಯುವುದು. ಇನ್ನೂ ಅನೇಕ ಪ್ರಕರಣಗಳಲ್ಲಿ ಮಧ್ಯವರ್ತಿಗಳು ರೈತರು ಬೆಳೆದಿರುವ ಮರಗಳನ್ನು/ಉತ್ಪನ್ನಗಳನ್ನು ಕಡಿಮೆ ಹಣವನ್ನು ಒಂದೇ ಬಾರಿಗೆ ನೀಡಿ ಖರೀದಿಸುವರು. ಇದರಿಂದ ಮಧ್ಯವರ್ತಿಗಳಿಗೆ ಹೆಚ್ಚಿನ ಲಾಭವಾಗುವುದು. ಅಲ್ಲದೆ ಇಂತಹ ಮಾಲ್ಕಿ ಪ್ರಕರಣಗಳು ಅನೈತಿಕ ಮಾರ್ಗಗಳಿಗೆ ಸಹ ಎಡೆ ಮಾಡಿಕೊಡುವುದು. ಒಟ್ಟಾರೆ ಹೇಳಬೇಕೆಂದರೆ ರೈತರು ಬೆಳೆದ ಮರದ



ಉತ್ಪನ್ನಗಳನ್ನು ರೈತರುಗಳೇ ಖರೀದಿದಾರರಿಗೆ ಮಾರಾಟ ಮಾಡದಿರುವುದರಿಂದ ಉತ್ಪನ್ನಗಳಿಗೆ ಆಕರ್ಷಕ ಬೆಲೆ ದೊರೆಯುವುದಿಲ್ಲ. ಮತ್ತೊಂದು ವಾಸ್ತವಾಂಶವೆಂದರೆ ರೈತರು ಬಹು ಬೇಗನೆ ಬೆಳೆಯುವ ಮರದ ಜಾತಿಗಳಾದ ಹೆಬ್ಬೇವು ಮತ್ತು ಸಿಲ್ವರ್‌ಓಕ್ ಬೆಳೆಯಲು ಆಸಕ್ತಿವಹಿಸಿರುವರು. ಏಕೆಂದರೆ ಈ ಎರಡೂ ಜಾತಿಯ ಮರಗಳ ಕಟಾವಿಗೆ ಮತ್ತು ಸಾಗಾಣಿಕೆಗೆ ಅರಣ್ಯ ಇಲಾಖೆಯಿಂದ ಅನುಮತಿ ಬೇಕಾಗಿರುವುದಿಲ್ಲ. ಈ ಎರಡೂ ಜಾತಿಯ ಮರಗಳಿಗೆ ಸಂಬಂಧಿಸಿದಂತೆ, ರೈತರೇ ನೇರವಾಗಿ ಖರೀದಿದಾರರೊಂದಿಗೆ ಮಾತುಕತೆ ನಡೆಸಿ ಮಾರಾಟ ಮಾಡುವುದರಿಂದ ಉತ್ತಮವಾದ ಬೆಲೆ ಪಡೆಯಲಿರುವರು. ಇನ್ನೂ ಕೆಲವು ರೈತರು ಸಾಗುವಾನಿ ಮರದ ಬೆಳೆ ಕಟಾವಿಗೆ ಇಲಾಖಾ ಅನುಮತಿ ಬೇಕಾಗಿರುವುದೆಂದು ಗೊತ್ತಿದ್ದರೂ ಸಹ ಇವುಗಳ ಕಟಾವಿನ ನಂತರ ಒಳ್ಳೆಯ ಬೆಲೆ ದೊರೆಯುವುದರಿಂದ, ಇವುಗಳನ್ನು ಬೆಳೆಯಲು ಮತ್ತು ಕಟಾವು ಮಾಡಲು ಹಣ ಖರ್ಚು ಮಾಡುವರು.

ರೈತರು ಬೆಳೆದ ಮರಗಳನ್ನು ಮಧ್ಯವರ್ತಿಗಳಿಲ್ಲದೆ ನೇರವಾಗಿ ಬಳಕೆದಾರರಿಗೆ ಮಾರಾಟ ಮಾಡುವುದೊಂದೇ ಅತ್ಯುತ್ತಮವಾದ ಮಾರಾಟದ ವಿಧಾನವಾಗಿದೆ. ಇದರಿಂದ ರೈತರ ಆರ್ಥಿಕ ಆಸಕ್ತಿಯನ್ನು ರಕ್ಷಿಸಿದಂತಾಗುವುದು. ರೈತರು ಬೆಳೆದ ಉತ್ಪನ್ನಗಳಿಗೆ ಉತ್ತಮವಾದ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವುದೇ ಮೊದಲ ಆದ್ಯತೆಯಾಗಬೇಕಿದೆಯೆಂದು ಈ ಹಿಂದಿನ ಅಧ್ಯಾಯಗಳಲ್ಲೂ ಸಹ ವಿವರಿಸಲಾಗಿದೆ. ಆದ್ದರಿಂದ ಈಗ ಅಸ್ತಿತ್ವದಲ್ಲಿರುವ, ಅರಣ್ಯ ಇಲಾಖೆಯು ಅನುಸರಿಸುತ್ತಿರುವ ವಿಧಾನವನ್ನು ರೈತರ ಜಮೀನಿನಲ್ಲಿ ಬೆಳೆದ ಮರಗಳ ಕಟಾವಿಗೆ ಮತ್ತು ಸಾಗಾಣಿಕೆಗೆ ಇನ್ನೂ ಸರಳೀಕರಣಗೊಳಿಸುವ ಅವಶ್ಯಕತೆಯಿದೆ. ರಾಷ್ಟ್ರೀಯ ಕೃಷಿ ಅರಣ್ಯ ನೀತಿ 2014ರಲ್ಲಿ ಹೇಳಿರುವಂತೆ ತುಂಬಾ ಸರಳವಾದ ವಿಧಾನವನ್ನು ಕೃಷಿ ಅರಣ್ಯ ಉತ್ಪನ್ನಗಳ ಕಟಾವು ಮತ್ತು ಸಾಗಾಣಿಕೆಗೆ ಅನುಸರಿಸಬೇಕೆಂದು ಒತ್ತಿ ಹೇಳಿರುವುದನ್ನು ಇಲ್ಲಿ ಸ್ಮರಿಸಬೇಕಿದೆ. ಈ ನೀತಿಯು ಅರಣ್ಯ ಉತ್ಪನ್ನಗಳನ್ನು ಖರೀದಿಸಲಿರುವ ಕಾರ್ಖಾನೆಗಳು ಹೆಚ್ಚಿನ ರೀತಿಯಲ್ಲಿ ಭಾಗವಹಿಸುವಂತೆ ಅನುವು ಮಾಡಿಕೊಡಲು ತಿಳಿಸಿದೆ ಹಾಗೂ ಇದರಿಂದ ರೈತರು ಬೆಳೆದ ಅರಣ್ಯ ಉತ್ಪನ್ನಗಳಿಗೆ ನೇರವಾಗಿ ಮಾರುಕಟ್ಟೆ ಕಲ್ಪಿಸಿದಂತಾಗುವುದು.

ಕರ್ನಾಟಕದಲ್ಲಿ ಕೃಷಿ ಅರಣ್ಯ ಪದ್ಧತಿಯು ಅನೇಕ ವರ್ಷಗಳಿಂದ ನಡೆದು ಬರುತ್ತಿದ್ದರೂ, ಅನೇಕ ರೈತರು ವ್ಯವಸ್ಥಿತವಾಗಿ ಮರಗಳನ್ನು ಬೆಳೆಯುವುದೊಂದು ವಿಭಿನ್ನವಾದ ಚಟುವಟಿಕೆಯಾಗಿರುವುದು ಇತ್ತೀಚಿನ ಒಂದು ದಶಕದಿಂದ ಮಾತ್ರವೇ. ಪ್ರಸ್ತುತದಲ್ಲಿ ಕೃಷಿ ಅರಣ್ಯ ಉತ್ಪನ್ನಗಳ ಲಭ್ಯತೆಯು ಒಂದು ಮಿತಿಯಲ್ಲಿದೆ. ಆದರೆ ಮರದ ದಿಮ್ಮಿ, ಉರುವಲು ಕಟ್ಟಿಗೆ, ಪೋಲ್ಸ್ ಮತ್ತು ಕೈಗಾರಿಕೆಗೆ ಬೇಕಾದ ಕಚ್ಚಾ ವಸ್ತುಗಳ ಬೇಡಿಕೆಯು ಅಗಾಧವಾಗಿದ್ದು, ಬೇಡಿಕೆಗೆ ಅನುಗುಣವಾಗಿ ಪೂರೈಕೆಯಾಗುತ್ತಿಲ್ಲ. ಸಧ್ಯದ ಪರಿಸ್ಥಿತಿಯಲ್ಲಿ ಪೂರೈಸುತ್ತಿರುವ ಮರದ ಉತ್ಪನ್ನಗಳು ಮಾರುಕಟ್ಟೆಯಲ್ಲಿ ಮಾರಾಟವಾಗುತ್ತಿವೆ. ಈಗಿರುವ ಮಾರುಕಟ್ಟೆಯು ಮೂಲತಃ ಮಾರಾಟ ಮಾಡುವವರ ಮಾರುಕಟ್ಟೆಯಾಗಿದ್ದು, ರೈತರು ಬೆಳೆದಿರುವ ಮರದ ಉತ್ಪನ್ನಗಳಿಗೆ ಸಮಂಜಸವಾದ ಬೆಲೆ ದೊರೆಯುತ್ತಿದೆ. ಆದರೆ, ಕೃಷಿ ಅರಣ್ಯ ಉತ್ಪನ್ನಗಳ ಪ್ರಮಾಣ ಹೆಚ್ಚಾದಂತೆ ಹಾಗೂ ಈಗಿರುವ ಪರಿಸ್ಥಿತಿಯು ಮುಂದುವರಿದಲ್ಲಿ, ಇನ್ನು ಕೆಲವೇ ವರ್ಷಗಳಲ್ಲಿ, ಈಗಿರುವ ಮಾರುಕಟ್ಟೆ ವ್ಯವಸ್ಥೆಯು ಬದಲಾಗಿ 'ಕೊಂಡುಕೊಳ್ಳುವವರ' ಮಾರುಕಟ್ಟೆಯಾಗಿ ಪರಿವರ್ತನೆಯಾಗಲಿದೆ. ಕಾರಣ ಪೂರೈಕೆಯು ಕಣ್ಣಿಗೆ ಕಾಣುವಂತಹ ಹೆಚ್ಚಳದಿಂದ. ಇಂತಹ ಪರಿಸ್ಥಿತಿಯಲ್ಲಿ ಬೆಳೆದಿರುವ ರೈತರ ಹಿತಾಸಕ್ತಿಯನ್ನು ಗಣನೆಗೆ ತೆಗೆದುಕೊಂಡು, ರೈತರಿಗೆ ನಿಜವಾದ (ನಿಖರವಾದ) ಬೆಲೆ ದೊರೆಯುವಂತೆ ಮಾಡಬೇಕಾಗುವ ಅನಿವಾರ್ಯತೆಯು ಸರ್ಕಾರದ ಜವಾಬ್ದಾರಿಯಾಗುತ್ತದೆ. ಇಲ್ಲಿ ಸರ್ಕಾರ ಮಧ್ಯ ಪ್ರವೇಶಿಸಿ ಮಾರುವವರ (ರೈತರ) ಮತ್ತು ಕೊಂಡುಕೊಳ್ಳುವವರಿಗೆ (ಮರದ ಉತ್ಪನ್ನಗಳ ಕೈಗಾರಿಕೆಗಳು) ಸಮಾನವಾದ ಒಂದು ವೇದಿಕೆಯನ್ನು ಸ್ಥಾಪಿಸಬೇಕಿದೆ. ಇದರಿಂದ ಎರಡೂ ಗುಂಪಿನವರಿಗೂ ಅನುಕೂಲವಾಗಲಿದೆ.

ಮುಂದಿನ ಪುಟಕ್ಕೆ...

ಈಗ ಕರ್ನಾಟಕ ಅರಣ್ಯ ಇಲಾಖೆಯು ಒಂದು ಪದ್ಧತಿಯನ್ನು ಅನುಸರಿಸುತ್ತಿದೆ, (ಕರ್ನಾಟಕ ಅರಣ್ಯ ಕಾಯ್ದೆ (KFA), 1963 ಮತ್ತು ಕರ್ನಾಟಕ ಅರಣ್ಯ ನಿಯಮಗಳು (KFR), 1969), ಇವುಗಳನ್ವಯ ಖಾಸಗಿ ಜಮೀನಿನಲ್ಲಿ ಬೆಳೆಸಿರುವ ಬೀಟೆಮರ (Rosewood) ಮತ್ತು ಶ್ರೀಗಂಧದ ಮರವನ್ನು ಸರ್ಕಾರಿ ಮರದ ಕೋಠಿಗೆ (ಡಿಪೋ) (GTD) ಸರ್ಕಾರಿ ಗಂಧದ ಕೋಠಿಗೆ (GSK) ತರಲಾಗುವುದು. ಇಲ್ಲಿಗೆ ಸಾಗಾಣಿಕೆಯನ್ನು ಇಲಾಖಾ ವತಿಯಿಂದ ಅಥವಾ ಮಾಲೀಕರೇ ಸಾಗಾಣಿಕೆ ಮಾಡುವರು. ಈ ಅರಣ್ಯ ಉತ್ಪನ್ನವನ್ನು ಬಹಿರಂಗ ಹರಾಜಿನಲ್ಲಿ ವಿಲೇವಾರಿ ಮಾಡಲಾಗುವುದು. ಶ್ರೀಗಂಧಕ್ಕೆ ಸಂಬಂಧಿಸಿದಂತೆ, ಮರದ ಕೊರಡುಗಳನ್ನು ಕೆತ್ತಿ, ನಂತರ ಬೇರೆ, ಬೇರೆ ಗುಂಪುಗಳಾಗಿ ಅಂದರೆ ಮಧ್ಯದ ಕೆಚ್ಚಿರುವ ಮರ (Heartwood), ಮಿಕ್ಸ್‌ವುಡ್, ಬಿಳಿಚಿಪ್ಸ್ ಇತ್ಯಾದಿಯಾಗಿ ಹರಾಜಿಗೆ ಮುಂಚಿತವಾಗಿ ವಿಂಗಡಿಸಲಾಗುತ್ತಿತ್ತು. ಈ ಮೊದಲು ಹರಾಜನ್ನು ಸ್ಥಳದಲ್ಲೇ ನಡೆಸಲಾಗುತ್ತಿತ್ತು ಹಾಗೂ ಖರೀದಿದಾರರು ಸ್ಥಳದಲ್ಲಿಯೇ ಲಾಟ್‌ಗಳಿಗೆ ಬೆಲೆಯನ್ನು ತಿಳಿಸಬೇಕಿತ್ತು. ಸ್ಥಳ ಅಂದರೆ ಸರ್ಕಾರಿ ಮರದ ಕೋಠಿ ಅಥವಾ ಸರ್ಕಾರಿ ಶ್ರೀಗಂಧದ ಕೋಠಿ. ಈಗ ಇ–ಹರಾಜಿನ ಮುಖಾಂತರ ಆನ್‌ಲೈನ್‌ನಲ್ಲಿ ಮಾಡಲಾಗುವುದು. ಈ ಎರಡೂ ತೆರನಾದ ಹರಾಜಿನಲ್ಲಿ ಇಲಾಖೆಯು ಮೇಲ್ವಿಚಾರಣ ವೆಚ್ಚವನ್ನು ವಸೂಲಿ ಮಾಡಿಕೊಳ್ಳುವುದು. (ಸಾಮಾನ್ಯವಾಗಿ ಹರಾಜಿನ ಮೌಲ್ಯದ ಶೇ.10 ರಷ್ಟು) ಮತ್ತು ಸಾಗಾಣಿಕೆ ವೆಚ್ಚ (ಇಲಾಖೆಯು ನಿರ್ವಹಿಸಿದ್ದಲ್ಲಿ) ಹಾಗೂ ರೂಪಾಂತರಗೊಳಿಸಿದ ವೆಚ್ಚ (ಶ್ರೀಗಂಧಕ್ಕೆ ಸಂಬಂಧಿಸಿದಂತೆ). ಆದ್ದರಿಂದ ಮಾರಾಟ ಮಾಡಲಿರುವ ರೈತರು ಹರಾಜು ಮೌಲ್ಯದ ಅಂದಾಜು ಶೇ.70–80 ಅವರ ಉತ್ಪನ್ನಗಳಿಗೆ ದೊರೆಯುತ್ತದೆ. ಇದಲ್ಲದೇ ಅರಣ್ಯ ಅಭಿವೃದ್ಧಿ ತೆರಿಗೆ (FDT) ಮತ್ತು ಇತರೆ ಅನ್ವಯಿಸಲಿರುವ ತೆರಿಗೆಗಳನ್ನು ಖರೀದಿದಾರರಿಂದ ಪಡೆದು ಸರ್ಕಾರದ ಲೆಕ್ಕಕ್ಕೆ ಜಮಾ ಮಾಡಲಾಗುವುದು. ಅರಣ್ಯ ಕಾಯ್ದೆಯನ್ವಯ ಅರಣ್ಯ ಅಭಿವೃದ್ಧಿ ತೆರಿಗೆಗಳನ್ನು ಮರದ ದಿಮ್ಮಿಗಳು, ಕಟ್ಟಿಗೆ, ಪೋಲ್ಸ್ ಇತ್ಯಾದಿಗಳಿಗೆ ಅರಣ್ಯಗಳ ಹೊರಗಡೆಯಿಂದ ಪಡೆದಿರುವ ವಸ್ತುಗಳು ಅಂದರೆ 'ಅರಣ್ಯ ಉತ್ಪನ್ನ' ಎಂದು ವಿವರಿಸಿರುವ ಉತ್ಪನ್ನಗಳಿಗೆ ಮತ್ತು ಯಾವುದಾದರೂ ಅರಣ್ಯ ಉತ್ಪನ್ನಗಳನ್ನು ಸರ್ಕಾರವು ಮಾರಾಟ ಮಾಡಿದಲ್ಲಿ ಅಥವಾ ಸರ್ಕಾರದ ಏಜೆನ್ಸಿಗಳು ವಿಲೇವಾರಿ ಮಾಡಿದ್ದಲ್ಲಿ ಅರಣ್ಯ ಅಭಿವೃದ್ಧಿ ತೆರಿಗೆಯನ್ನು ವಿಧಿಸಲಾಗುವುದು. ಖರೀದಿದಾರರು ಹರಾಜಿನಲ್ಲಿ ದರವನ್ನೂ ಅರಣ್ಯ ಉತ್ಪನ್ನದ ಲಾಟ್‌ಗೆ ಪೂರ್ಣವಾಗಿ, ಅಂದರೆ ತಗಲುವ ತೆರಿಗೆಗಳನ್ನು ಪರಿಗಣಿಸಿ ದರವನ್ನು ಲಾಟ್‌ಗೆ (ಗುಂಪಿಗೆ) ಒಟ್ಟಾರೆಯಾಗಿ ನೀಡಬೇಕಾಗುವುದು. ಇಲ್ಲಿ ಅರಣ್ಯ ಅಭಿವೃದ್ಧಿ ತೆರಿಗೆ ಶೇ.12 ರಷ್ಟಿರುವುದರಿಂದ, ಖರೀದಿದಾರರು ಇವೆಲ್ಲವುಗಳನ್ನು ಮನದಲ್ಲಿಟ್ಟುಕೊಂಡು ದರವನ್ನು ನೀಡುವರು. ಒಂದು ವೇಳೆ ಅರಣ್ಯ ಅಭಿವೃದ್ಧಿ ತೆರಿಗೆಯಿಲ್ಲದಿದ್ದರೆ ಯಾವ ದರವನ್ನು ನೀಡಬಹುದಿತ್ತೋ, ಅದನ್ನು ಪರಿಗಣಿಸಿ, ಹರಾಜಿನಲ್ಲಿ ಅರಣ್ಯ ಉತ್ಪನ್ನಗಳ ಗುಂಪಿಗೆ ದರವನ್ನು ನೀಡುವರು. ಆದ್ದರಿಂದ ಕೃಷಿ ಅರಣ್ಯದಲ್ಲಿ ಬೆಳೆದ ಮರದ ಉತ್ಪನ್ನಗಳನ್ನು ಸರ್ಕಾರದಿಂದ ವಿಲೇವಾರಿ ಮಾಡಿದಲ್ಲಿ ರೈತರು ತುಂಬಾ ಹಣವನ್ನು ತೆರಿಗೆ ರೂಪದಲ್ಲಿ ಕೊಡಬೇಕಾಗಿರುವುದರಿಂದ, ಅವರ ಉತ್ಪನ್ನಗಳಿಗೆ ಮಾರಾಟವಾದ ಬೆಲೆಯಲ್ಲಿ ಬಹಳಷ್ಟು ಹಣವನ್ನು ಕಳೆದುಕೊಳ್ಳಬೇಕಾಗಿದೆ. ಕೃಷಿ ಅರಣ್ಯದಲ್ಲಿ ಬೆಳೆದ ಅರಣ್ಯ ಉತ್ಪನ್ನಗಳಿಗೆ ಅರಣ್ಯ ಅಭಿವೃದ್ಧಿ ತೆರಿಗೆಯಿಂದ ರೈತರಿಗೆ ಉಂಟಾಗುವ ನಷ್ಟವನ್ನು ತಪ್ಪಿಸಲು ಇತರೆ ಸರ್ಕಾರೇತರ ಏಜೆನ್ಸಿಗಳ ಮೂಲಕ ಮಾಡುವುದು ಸೂಕ್ತವಾಗಿದೆ.

ಮೇಲೆ ತಿಳಿಸಿರುವ ಅಂಶಗಳನ್ವಯ, ಪ್ರಾಯೋಗಿಕವಾಗಿ ಸರ್ಕಾರದಿಂದ ಪ್ರತಿ ತಾಲ್ಲೂಕು ಅಥವಾ ಹೋಬಳಿ ಮಟ್ಟದಲ್ಲಿ ಒಂದು ಸ್ಥಳವನ್ನು ನಿಗಧಿಪಡಿಸಿ, ಎಲ್ಲಾ ರೈತರು ಅರಣ್ಯ ಉತ್ಪನ್ನಗಳನ್ನು ಇಲ್ಲಿಗೆ ತಂದು ಶೇಖರಣೆ ಮಾಡುವ ವ್ಯವಸ್ಥೆಯನ್ನು ಕಲ್ಪಿಸಬೇಕಿದೆ. ನಂತರ ತಾಲ್ಲೂಕು/ಹೋಬಳಿ ಮಟ್ಟದಲ್ಲಿ ರೈತರೇ ಒಂದು ಸಹಕಾರಿ ಸಂಘವನ್ನೂ ಸ್ಥಾಪನೆ ಮಾಡಿ, ಅವರ ನೇರ ಮೇಲ್ವಿಚಾರಣೆಯಲ್ಲಿ ಹರಾಜಿಗೂ ಮುನ್ನ ಸೂಕ್ತ ಪ್ರಚಾರವನ್ನು ಖರೀದಿದಾರರಿಗೆ, ಅಂದರೆ ಹರಾಜು ನಡೆಸುವ ಸ್ಥಳ ಮತ್ತು ದಿನಾಂಕದ ಬಗ್ಗೆ ಸೂಕ್ತ ಪ್ರಚಾರವನ್ನು ಹರಾಜಿಗೂ ಮುನ್ನವೇ ಕೈಗೊಂಡು, ಹರಾಜು ಪ್ರಕ್ರಿಯೆಯನ್ನು ನಡೆಸುವುದು ಸೂಕ್ತವಾಗಿದೆ. ಈ ಒಂದು ಸಲಹೆಯು ಕೃಷಿ ಅರಣ್ಯದ ಮರದ ಉತ್ಪನ್ನಗಳಿಗೆ ಅನ್ವಯಿಸಲಿದೆ. ಆದರೆ ಶ್ರೀಗಂಧ ಮತ್ತು ಬೀಟೆ ಮರಕ್ಕೆ ಸಂಬಂಧಿಸಿದಂತೆ ಈಗ ಅಸ್ತಿತ್ವದಲ್ಲಿರುವ ಕಾನೂನಿನಂತೆ ನಡೆಸಲಾಗುವುದು. (ವಿ.ಸೂ: ಮರದ ದಿಮ್ಮಿಗಳು, ಪೋಲ್ಸ್ ಮತ್ತು ಉರುವಲು ಕಟ್ಟಿಗೆಗಳ ಜೊತೆಗೆ ಮರಗಳಿಂದ ಪಡೆದ ಹಣ್ಣು ಮತ್ತು ಬೀಜಗಳಿಂದ ಅಳಲೆಕಾಯಿ (ಹರಡಾ), ತಾರೆ, ನೆಲ್ಲಿ, ಮುತ್ತುಗದ ಬೀಜ, ಇಪ್ಪೆ ಬೀಜ ಮುಂತಾದವುಗಳನ್ನು ಖಾಸಗೀ ಜಮೀನು ಅಥವಾ ಫಾರಂಗಳಿಂದ ಪಡೆದಲ್ಲಿ ಇವುಗಳು ಸಹ ಅರಣ್ಯ ಉತ್ಪನ್ನಗಳ ಪರಿಮಿತಿಯಲ್ಲಿ ಬರಲಿವೆ.)

ಇಲ್ಲಿ ಒಂದು ಅಂಶವನ್ನು ಮನದಲ್ಲಿಟ್ಟುಕೊಳ್ಳಬೇಕಿದೆ. ಅದೇನೆಂದರೆ ಕೃಷಿ ಅರಣ್ಯದಿಂದ ದೊರೆಯುವ ಮರದ ಉತ್ಪನ್ನಗಳಾದ ಮರದ ದಿಮ್ಮಿ, ಉರುವಲು ಕಟ್ಟಿಗೆ, ಪಲ್ಪ್‌ವುಡ್ ಇತ್ಯಾದಿಗಳನ್ನು ಒಂದೇ ವೇದಿಕೆಗೆ ರೈತರು ಸಾಗಾಣಿಕೆ ಮಾಡಲು ಮತ್ತು ಅಲ್ಲಿ ಶೇಖರಿಸಿದ ವಸ್ತುಗಳ ಮೇಲ್ವಿಚಾರಣೆಗೆ ರೈತರು ಸಾಕಷ್ಟು ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಇಷ್ಟೇ ಅಲ್ಲದೆ ಅಲ್ಲಿ ಶೇಖರಿಸಿದ ವಸ್ತುಗಳನ್ನು ವಿಲೇವಾರಿಯಾಗುವವರೆಗೆ ಕಾವಲು ಕಾಯಲು ಸಾಕಷ್ಟು ಹಣವನ್ನು ವ್ಯಯಿಸಬೇಕಿದೆ. ಇಂತಹ ಖರ್ಚು–ವೆಚ್ಚವನ್ನು ಇ–ಹರಾಜಿನ ಮೂಲಕ ಸ್ಥಳದಲ್ಲೇ ಶೇಖರಿಸಿದ ಅರಣ್ಯ ಉತ್ಪನ್ನಗಳಿಗೆ ನಿರ್ವಹಿಸಬಹುದು. ಇಂತಹ ಪದ್ಧತಿಯಲ್ಲಿ ಕೃಷಿ ಅರಣ್ಯ ಉತ್ಪನ್ನಗಳ ವಿವರ ಅಂದರೆ ಯಾವ ಜಾತಿಯ ಮರ, ಪ್ರಮಾಣ ಮತ್ತು ಶೇಖರಿಸಿದ ಸ್ಥಳದ ವಿವರ ಇತ್ಯಾದಿಗಳನ್ನು ಅವುಗಳ ಛಾಯಾಚಿತ್ರಗಳೊಂದಿಗೆ ಇ–ಮಾರ್ಕೆಟಿಂಗ್ ಅಥವಾ ಇ–ಹರಾಜು ಪೋರ್ಟಲ್‌ಗಳ ಮುಂಖಾಂತರ ನಿರ್ವಹಿಸಬಹುದು. ಈ ಏಜೆನ್ಸಿಗಳು ಸರ್ಕಾರದಿಂದ ನಿಗಧಿಪಡಿಸಿದ ಅಥವಾ ಸಾರ್ವಜನಿಕ ಸರ್ಕಾರದ ಉದ್ದಿಮೆಗಳ ಮುಖಾಂತರ ನಡೆಸಲು ತಿಳಿಸಬಹುದು. ಇಲ್ಲಿ ಮಾರಾಟ ಮಾಡುವ ರೈತರು ಮತ್ತು ಖರೀದಿದಾರರು ನೋಂದಾಯಿಸಿಕೊಳ್ಳಬೇಕಿದೆ ಹಾಗೂ ಇ–ಕಾಮರ್ಸ್ ಏಜೆನ್ಸಿಯವರು ವಿಧಿಸುವ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು. ಆಸಕ್ತಿಯುಳ್ಳ ಖರೀದಿದಾರರಿಗೆ ಸಾಕಷ್ಟು ಸಮಯವನ್ನು ರೈತರ ಜಮೀನಿನಲ್ಲಿರುವ ಅರಣ್ಯ ಉತ್ಪನ್ನಗಳ ತಪಾಸಣೆಗೆ (ಪರಿಶೀಲನೆ) ಅವಕಾಶವನ್ನು ನೀಡಬೇಕಿದೆ. ನಿರಂತರ ಆನ್‌ಲೈನ್ ಹರಾಜನ್ನು ಇ–ಕಾಮರ್ಸ್ ಏಜೆನ್ಸಿಗಳು ಖರೀದಿದಾರರು ನೀಡಬೇಕಾದ ಕನಿಷ್ಟ ಬೆಲೆಯನ್ನು ರೈತರೊಡನೆ ಸಮಾಲೋಚನೆ ನಡೆಸಿ ನಿಗಧಿಪಡಿಸಬೇಕಿದೆ ಹಾಗೂ ಹರಾಜನ್ನು ನಡೆಸಬಹುದು. ನಿಗಧಿಪಡಿಸಿದ ಷರತ್ತುಗಳನ್ವಯ ಇ–ಹರಾಜಿನಲ್ಲಿ ಯಶಸ್ವಿಯಾದ ಖರೀದಿದಾರರಿಂದ ಎಲ್ಲಾ ಹಣವನ್ನು ಪಡೆದ ನಂತರವೇ ಹರಾಜಿಗಿಟ್ಟಿದ್ದ ಅರಣ್ಯ ಉತ್ಪನ್ನಗಳನ್ನು ತೆಗೆದುಕೊಂಡು ಹೋಗಲು ಮತ್ತು ಸಾಗಾಣಿಕೆ ಮಾಡಲು ತಿಳಿಸಬಹುದು.

ಮೇಲಿನ ವಿಧಾನವು ಯಾವ ಮರಗಳಿಗೆ ಕಟಾವಣೆ ಮತ್ತು ಸಾಗಾಣಿಕೆ ಮಾಡಲು ಅರಣ್ಯ ಇಲಾಖೆಯಿಂದ ಅನುಮತಿಯ ಅವಶ್ಯಕತೆಯಿಲ್ಲವೋ ಅಂದರೆ ಹೆಬ್ಬೇವು ಮತ್ತು ಸಿಲ್ವರ್‌ಓಕ್ ಮರಗಳಿಗೆ ಸಂಬಂಧಿಸಿದಂತೆ ಯಾವುದೆ ಸಮಸ್ಯೆಯಿಲ್ಲದೇ ಸರಳವಾಗಿದೆ. ಅರಣ್ಯ ಇಲಾಖೆಯಿಂದ ವಿನಾಯ್ತಿ ನೀಡದ ಇತರೇ ಜಾತಿಯ ಮರಗಳಿಗೆ ಇಲಾಖೆಯಿಂದ ಅನುಮತಿ ಪಡೆದ ನಂತರ ಅನ್ವಯಿಸಬಹುದು. ಇಲ್ಲಿ ಅರಣ್ಯ ಇಲಾಖೆಯ ವಿಧಾನದಲ್ಲಿ ಬದಲಾವಣೆಯಾಗಬೇಕು ಹಾಗೂ ಈಗಿರುವಂತೆ ಮರಗಳ ಕಟಾವಣೆಗೆ ಮತ್ತು ಸಾಗಾಣಿಕೆಗೆ ಇರುವ ನಿಯಮಗಳನ್ನು ಈ ಹಿಂದಿನ ಲೇಖನದಲ್ಲಿ ತಿಳಿಸಿರುವಂತೆ ಸರಳೀಕರಣಗೊಳಿಸಬೇಕು. ಇದರಿಂದ ಮರ ಬೆಳೆಯುವವರಿಗೆ ಇಲಾಖೆಯ ಪ್ರೋತ್ಸಾಹದ ಜೊತೆಗೆ ಕಾನೂನಿನ ಅಡಚಣೆಯ ನಿವಾರಣೆಯು ಕೃಷಿ ಅರಣ್ಯ ಪದ್ಧತಿಯಲ್ಲಿ ಬಹಳ ಬದಲಾವಣೆ ಉಂಟಾಗುವುದರಲ್ಲಿ ಯಾವುದೇ ಸಂಶಯವಿಲ್ಲ. ಇದರಿಂದ ರಾಜ್ಯದಲ್ಲಿಯ ನೈಸರ್ಗಿಕ ಅರಣ್ಯಗಳ ಮೇಲಿನ ಒತ್ತಡ ಕಡಿಮೆ ಮಾಡಲು ಹಾಗೂ ಕೃಷಿ ಅರಣ್ಯದ ಪ್ರಗತಿಯನ್ನು ಹೆಚ್ಚಿಸಲು ಅರಣ್ಯ ಇಲಾಖೆಯು ಈಗಿರುವ ಅರಣ್ಯ ನೀತಿಯನ್ನು ಸರಳೀಕರಿಸುವಲ್ಲಿ ಗಂಭೀರವಾದ ಚಿಂತನೆ ನಡೆಸಬೇಕಿದೆ. ರಾಜ್ಯದಲ್ಲಿ ಶ್ರೀಗಂಧಕ್ಕೆ ಸಂಬಂಧಿಸಿದಂತೆ 2001ರಲ್ಲಿ ಕರ್ನಾಟಕ ಅರಣ್ಯ ಕಾನೂನಿಗೆ ತಿದ್ದುಪಡಿ ತಂದಿದ್ದು, ಶ್ರೀಗಂಧವನ್ನು ಬೆಳೆದ ಮಾಲೀಕರಿಗೆ ಮಾರಾಟ ಮಾಡಲು ಸರ್ಕಾರದ ಎರಡು ಸಾರ್ವಜನಿಕ ಉದ್ದಿಮೆಗಳಾದ ಕರ್ನಾಟಕ ರಾಜ್ಯ ಕರಕುಶಲ ನಿಗಮ ನಿಯಮಿತ (KSHDC) ಮತ್ತು ಕರ್ನಾಟಕ ಸಾಬೂನು ಮತ್ತು ಮಾರ್ಜಕ ಸಂಸ್ಥೆಗಳಿಗೆ (KSDL) ನೇರವಾಗಿ ಮಾರಾಟ ಮಾಡಬಹುದಾಗಿದೆ. ಶ್ರೀಗಂಧ ಕಟಾವಣೆ ಮತ್ತು ಸಾಗಾಣಿಕೆಗೆ ಚಾಲ್ತಿಯಲ್ಲಿರುವ ನಿಯಮದಂತೆ ಅನುಮತಿ ಪಡೆಯಬೇಕಿದೆ.

ಕೃಷಿಯಿಂದ ಬರುವ ಆದಾಯಕ್ಕೆ ಆದಾಯ ತೆರಿಗೆ ಕಾಯ್ದೆ 1961ರ ಸೆಕ್ಷನ್ 10(1) ರಿಂದ ವಿನಾಯ್ತಿಯಿದೆ. ಆದರೆ ಕೃಷಿ/ಫಾರಂ ಜಮೀನುಗಳಿಂದ ಪಡೆದ ಅರಣ್ಯ ಉತ್ಪನ್ನಗಳಿಗೆ ಎಲ್ಲಾ ಸಂದರ್ಭದಲ್ಲೂ ವಿನಾಯ್ತಿ ಇರುವುದಿಲ್ಲ. ಉದಾಹರಣೆಗೆ, ರೈತರು ಬೆಳೆದ ಮರದ ಉತ್ಪನ್ನಗಳಿಂದ ಬರುವ ಆದಾಯಕ್ಕೆ ವಿನಾಯ್ತಿ ಇದೆ. ಆದರೆ ರೈತರ ಜಮೀನುಗಳಲ್ಲಿ ಸ್ವಾಭಾವಿಕವಾಗಿ ಬೆಳೆದಿರುವ ಮರಗಳ ಮಾರಾಟದಿಂದ ಬರುವ ಆದಾಯಕ್ಕೆ ಆದಾಯ ತೆರಿಗೆಯನ್ನು ಪಾವತಿಸಬೇಕಿದೆ. ರೈತರ ಜಮೀನುಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುವ ಮರಗಳಿಂದ ರೈತರಿಗೆ ಬರುವ ಆದಾಯಕ್ಕೆ ತೆರಿಗೆ ವಿಧಿಸಿರುವುದು ಸಮರ್ಥನೀಯವಾದುದ್ದಲ್ಲ. ಇದರಿಂದ ರೈತರು ಅವರ ಜಮೀನುಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುವ ಮರಗಳನ್ನು ಅವುಗಳ ಚಿಕ್ಕ ಸಸಿಗಳಾಗಿದ್ದಾಗಲೇ ಮುಂದಿನ ಪುಟಕ್ಕೆ...

ಕಿತ್ತು ಹಾಕುವರು. ಇದರಿಂದ ರಾಜ್ಯದಲ್ಲಿ ಹಸಿರು ಬೆಳೆಯುವವರಿಗೆ ಪ್ರೋತ್ಸಾಹದಾಯಕ ವಾಗಿರುವುದಿಲ್ಲ.

ಕೃಷಿ ಉತ್ಪನ್ನಗಳಿಗೆ ಖರೀದಿದಾರರು ಆದಾಯ ತೆರಿಗೆ ಪಾವತಿಸಬೇಕಾಗಿರುವುದಿಲ್ಲ. ಆದರೆ ಕೃಷಿ ಭೂಮಿಯಿಂದ ಪಡೆದ ಕೃಷಿ ಅರಣ್ಯದ ಉತ್ಪನ್ನಗಳಾದ ಮರದ ದಿಮ್ಮಿಗಳು, ಉರುವಲು ಕಟ್ಟಿಗೆ ಇತ್ಯಾದಿಗಳಿಗೆ ಖರೀದಿದಾರರು ಆದಾಯ ತೆರಿಗೆಯನ್ನು ಪಾವತಿಸಬೇಕಿದೆ. ಇದಕ್ಕೆ ಕಾರಣ ಆದಾಯ ತೆರಿಗೆ ಕಾಯ್ದೆ 1996ರ ಸೆಕ್ಷನ್ 206ರಡಿ ಮರದ ದಿಮ್ಮಿಗಳು ಮತ್ತು ಉರುವಲು ಕಟ್ಟಿಗೆ ಇತ್ಯಾದಿಗಳನ್ನು ಅರಣ್ಯದಿಂದ ಅಥವಾ ಬೇರೆಡೆಯಿಂದ ಪಡೆದಿದ್ದರೂ, 'ಅರಣ್ಯ ಉತ್ಪನ್ನ'ಗಳ ವ್ಯಾಖ್ಯಾನದಂತೆ ಚಾಲ್ತಿಯಲ್ಲಿರುವ ಕಾನೂನಿನನ್ವಯ ಖರೀದಿದಾರರು ಆದಾಯ ತೆರಿಗೆಯನ್ನು ಪಾವತಿಸಬೇಕಿದೆ. ಇದರಿಂದ ಸ್ವಾಭಾವಿಕವಾಗಿ ಖರೀದಿದಾರರು ರೈತರ ಜಮೀನುಗಳಿಂದ ಖರೀದಿಸುವ ಮರದ ದಿಮ್ಮಿ, ಉರುವಲು ಕಟ್ಟಿಗೆಗಳಿಗೆ ಕಡಿಮೆ ಬೆಲೆ ದೊರೆಯಲಿದೆ. ರೈತರು ಕೃಷಿ ಅರಣ್ಯದ ಉತ್ಪನ್ನಗಳಿಗೆ ಪೂರ್ಣ ಅಥವಾ ಹೆಚ್ಚಿಗೆ ಬೆಲೆ ಪಡೆಯಲು ಎಲ್ಲಾ ಕೃಷಿ ಅರಣ್ಯ ಉತ್ಪನ್ನಗಳಿಂದ ಬರುವ ಆದಾಯಕ್ಕೆ ಆದಾಯ ತೆರಿಗೆ ವಿನಾಯ್ತಿ ನೀಡುವುದು ಸಮರ್ಥನೀಯವಾದದ್ದು. ಆದ್ದರಿಂದ ಆದಾಯ ತೆರಿಗೆ ಕಾಯ್ದೆಯಲ್ಲಿರುವಂತೆ 'ಅರಣ್ಯ ಉತ್ಪನ್ನ'ದ ವ್ಯಾಖ್ಯಾನವನ್ನು ಕೃಷಿ ಅರಣ್ಯದಿಂದ ಪಡೆದ ಉತ್ಪನ್ನಗಳಿಗೆ 'ಕೃಷಿ ಉತ್ಪನ್ನ'ವೆಂದು ಪರಿಗಣಿಸುವುದು ಸೂಕ್ತವಾಗಿದೆ. ■

## ವರದಿ

### ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯ ಏಪ್ರಿಲ್ 2021ರಿಂದ ಜೂನ್ 2021ರವರೆಗಿನ ಕಾರ್ಯಕ್ರಮಗಳು

**ಕಾರ್ಯದರ್ಶಿ, ಮೊ: 9448019306**

1 ದಿ:28-03-2021 ರಂದು ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ, ಬೆಂಗಳೂರು, ಕೃಷಿ ವಿಶ್ವ ವಿದ್ಯಾನಿಲಯ, ಬೆಂಗಳೂರು, ಕರ್ನಾಟಕ ಅರಣ್ಯ ಇಲಾಖೆ, ಕೋಲಾರ ಜಿಲ್ಲೆಯ ಕೃಷಿ ಇಲಾಖೆ ಹಾಗೂ ಡಾ. ಎಸ್.ಸಿ.ವಿ. ರೆಡ್ಡಿ ಮತ್ತು ಸಹೋದರರ ಸಂಯುಕ್ತ ಆಶ್ರಯದಲ್ಲಿ ಕೃಷಿ ಕ್ಷೇತ್ರ, ಎಟ್ಟಕೋಡಿ, ಚಿಕ್ಕತಿರುಪತಿ ಇಲ್ಲಿ **"ಖುಷ್ಕಿ ಕೃಷಿಅರಣ್ಯ ಕ್ಷೇತ್ರೋತ್ಸವ ಮತ್ತು ವಿಚಾರ ಗೋಷ್ಠಿ ನಡೆಸಲಾಯಿತು ಹಾಗೂ ವಿಶ್ವ ವನ್ಯಜೀವಿ, ಗುಬ್ಬಚ್ಚಿ, ಕಪ್ಪೆ, ಅರಣ್ಯ, ಜಲ ಹಾಗೂ ವಾಯುಗುಣ ದಿನಾಚರಣೆ – ಮಾರ್ಚ 2021**ನ್ನು ರೆಡ್ಡಿ ಸಹೋದರರ ತೋಟದಲ್ಲಿ ಗಿಡಗಳನ್ನು ನೆಡುವ ಮೂಲಕ ಆಚರಿಸಲಾಯಿತು.

2. ಸಂಸ್ಥೆಯು ಪ್ರಕಟಿಸುತ್ತಿರುವ ಕೃಷಿವನ ಜನವರಿ-ಮಾರ್ಚಿ 2021ರ ತ್ರೈಮಾಸಿಕ ವಾರ್ತಾಪತ್ರಿಕೆಯಲ್ಲಿ ನಾಲ್ಕು ಪುಟಗಳನ್ನು ಹೆಚ್ಚಿಸಿ ಒಟ್ಟು ಹದಿನಾರು ಪುಟಗಳ ಸಂಪುಟ-3 ಸಂಚಿಕೆ-1ನ್ನು ದಿ:28-03-2021 ರಂದು ಶ್ರೀಮತಿ ಅನಿತಾ ಅರೇಕಲ್, ಭಾ.ಅ.ಸೇ, ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಸಾಮಾಜಿಕ ಅರಣ್ಯ) ಇವರಿಂದ ಖುಷ್ಕಿ ಕೃಷಿಅರಣ್ಯ ಕ್ಷೇತ್ರೋತ್ಸವ ಮತ್ತು ವಿಚಾರ ಗೋಷ್ಠಿಯಲ್ಲಿ ಬಿಡುಗಡೆ ಮಾಡಿಸಲಾಯಿತು. ಡಾ. ರಾಜೇಂದ್ರ ಪ್ರಸಾದ್, ಕುಲಪತಿಗಳು ಕೃಷಿ ವಿವಿ, ಜಿಕೆವಿಕೆ ಬೆಂಗಳೂರು ಉಪಸ್ಥಿತರಿದ್ದರು.

3. ದಿ: 26-05-2021 ರಂದು ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವದ ಅಂಗವಾಗಿ ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ಕೋಲಾರ, ಸಾಮಾಜಿಕ ಅರಣ್ಯ ವಿಭಾಗ, ಕೋಲಾರ ಇವರು ಆಯೋಜಿಸಿದ್ದ **'ಕೃಷಿಅರಣ್ಯ ವಿಚಾರಗೋಷ್ಠಿ' ಅಂತರ್ಜಾಲ ಸಮಾವೇಶದ**ಲ್ಲಿ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಎ.ಎಮ್. ಅಣ್ಣಯ್ಯ, ಭಾ.ಅ.ಸೇ. (ನಿವೃತ್ತ), ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ **'ಕೃಷಿಅರಣ್ಯ ಪದ್ಧತಿಗಳು ಮತ್ತು ಮಾದರಿಗಳು'** ವಿಷಯದ ಕುರಿತು ಸಮಗ್ರವಾಗಿ PPT ಮೂಲಕ ಮಾಹಿತಿಯನ್ನು ನೀಡಿದರು.

4. ದಿ: 05-06-2021ರಂದು ಕೃಷಿ ವಿಶ್ವ ವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರು (ಅರಣ್ಯ ಮತ್ತು ಪರಿಸರ ವಿಜ್ಞಾನ ವಿಭಾಗ ಹಾಗೂ ಯೂತ್ ರೆಡ್ ಕ್ರಾಸ್) ಹಾಗೂ ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ, ಇವರ ಸಂಯುಕ್ತ ಆಶ್ರಯದಲ್ಲಿ **'ವಿಶ್ವ ಪರಿಸರ ದಿನಾಚರಣೆ'** ಕಾರ್ಯಕ್ರಮವನ್ನು Zoom Meet ಮೂಲಕ ನಡೆಸಲಾಯಿತು. ಜಿಕೆವಿಕೆ ಕ್ಯಾಂಪಸ್‌ನಲ್ಲಿ ಗಿಡ ನೆಡುವ ಮೂಲಕ ಡಾ. ಎಸ್. ರಾಜೇಂದ್ರ ಪ್ರಸಾದ್, ಕುಲಪತಿಗಳು, ಕೃಷಿ ವಿವಿ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಸಂಸ್ಥೆಯ ಕಾರ್ಯದರ್ಶಿಯವರು ವಿಶ್ವ ಪರಿಸರ ದಿನಾಚರಣೆ ಕುರಿತು ಮಾತನಾಡಿದರು. ಸಂಸ್ಥೆಯ ಅಧ್ಯಕ್ಷರಾದ ಶ್ರೀ ದೀಪಕ್ ಶರ್ಮ, ಭಾ.ಅ.ಸೇ. (ನಿವೃತ್ತ) ಇವರು ಮುಖ್ಯ ಅತಿಥಿಗಳಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸಂಸ್ಥೆಯ ಸಹ ಅಧ್ಯಕ್ಷರಾದ ಶ್ರೀ. ಎನ್. ಸಂಪಂಗಿ, ಉಪಾಧ್ಯಕ್ಷರಾದ ಶ್ರೀ ಆರ್. ಎಮ್. ಪಾಲಣ್ಣ, ಜಂಟಿ ಕಾರ್ಯದರ್ಶಿಗಳಾದ ಡಾ. ಎಮ್. ಮಹದೇವಮೂರ್ತಿ, ಸದಸ್ಯರಾದ ಶ್ರೀ. ಎನ್. ಸ್ವಾಮಿರಾವ್, ಶ್ರೀಮತಿ ಎಚ್.ಜಿ. ಶೋಭಾ ಮತ್ತಿತರರು ಭಾಗವಹಿಸಿದ್ದರು.

5. ದಿ: 07-06-2021 ರಂದು ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವದ ಅಂಗವಾಗಿ ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ಉಡುಪಿ, ಸಾಮಾಜಿಕ ಅರಣ್ಯ ವಿಭಾಗ, ಉಡುಪಿ ಜಿಲ್ಲೆ ಹಾಗೂ ಕೃಷಿ ವಿಜ್ಞಾನ ಕೇಂದ್ರ, ಬ್ರಹ್ಮಾವರ, ಕರ್ನಾಟಕ ಗೇರು ಅಭಿವೃದ್ಧಿ ನಿಗಮ, ಮಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ **'ಕರಾವಳಿ ಕೃಷಿಅರಣ್ಯ ವಿಚಾರಗೋಷ್ಠಿ'** ಅಂತರ್ಜಾಲ ಸಮಾವೇಶದಲ್ಲಿ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಎ.ಎಮ್. ಅಣ್ಣಯ್ಯ, ಭಾ.ಅ.ಸೇ. (ನಿವೃತ್ತ), ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ **'ಕರಾವಳಿ ಕೃಷಿಅರಣ್ಯ ಪದ್ಧತಿಗಳು ಮತ್ತು ಮಾದರಿಗಳು'** ವಿಷಯದ ಕುರಿತು ಸಮಗ್ರವಾಗಿ PPT ಮೂಲಕ ಮಾಹಿತಿಯನ್ನು ನೀಡಿದರು.

6. ದಿನಾಂಕ: 27-05-2021ರಂದು ಸಂಸ್ಥೆಯ ಕಾರ್ಯದರ್ಶಿಯವರು **ವರ್ಲ್ಡ್ ರಿಸೋರ್ಸಸ್ ಇನ್ಸ್ಟಿಟ್ಯೂಟ್ ಇಂಡಿಯಾ** ಸಂಸ್ಥೆಯೊಡನೆ, **ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ ಹಾಗೂ ಕರ್ನಾಟಕದಲ್ಲಿ ಕೃಷಿ ಅರಣ್ಯ**ದ ಬಗ್ಗೆ ಸಂದರ್ಶನ ನೀಡಿರುತ್ತಾರೆ.

7. ಮೇ 2021ರ ಕೊನೆಯ ಭಾಗದಲ್ಲಿ ಸಂಸ್ಥೆಯ **ಅಜೀವ ಸದಸ್ಯರಾದ ಡಾ. ಎಸ್.ಸಿ.ವಿ. ರೆಡ್ಡಿ**ಯವರು ವರ್ಲ್ಡ್ ರಿಸೋರ್ಸಸ್ ಇನ್ಸ್ಟಿಟ್ಯೂಟ್ ಇಂಡಿಯಾ ಸಂಸ್ಥೆಯೊಡನೆ, ಕರ್ನಾಟಕದಲ್ಲಿ ಕೃಷಿ ಅರಣ್ಯದ ಬಗ್ಗೆ ಸಂದರ್ಶನ ನೀಡಿರುತ್ತಾರೆ.

8. ದಿನಾಂಕ: 30-06-2021ರಂದು ಸಂಸ್ಥೆಯ ಕಾರ್ಯದರ್ಶಿಗಳು ಮದ್ದೂರು ತಾಲ್ಲೂಕು, ಕೆರೆಮೇಗಲದೊಡ್ಡಿಯಲ್ಲಿ ಶ್ರೀ ವರದರಾಜು, ಕೃಷಿಕರು, ಸಾವಯವ ಕೃಷಿ ಪದ್ಧತಿಯಲ್ಲಿ ಅಡಿಕೆ+ಮೆಣಸು, ತೆಂಗು+ಮೆಣಸು, ಅಡಿಕೆ ನರ್ಸರಿ ಹಾಗೂ ಗೇರು ತೋಟಗಳನ್ನು ನಿರ್ಮಿಸಿರುವುದನ್ನು ವೀಕ್ಷಿಸಿ, ಅದೇ ಮಾದರಿಯ ತೋಟಗಳನ್ನು ವಿಸ್ತರಿಸಲು ಅವರೊಡನೆ ವಿಚಾರ ವಿನಿಮಯ ಮಾಡಲಾಯಿತು.

– ಕಾರ್ಯದರ್ಶಿ, ಕೃಷಿಅರಣ್ಯ ಸಂಸ್ಥೆ

# ಕೃಷಿ ಬ್ರಹ್ಮ ಡಾ. ಎಲ್. ನಾರಾಯಣರೆಡ್ಡಿ

ಮಣ್ಣಿಂದ ಕಾಯ ಮಣ್ಣಿಂದ...

✍ ಚಿನ್ನಸ್ವಾಮಿ ವಡ್ಡಗೆರೆ ಮೊ.93804 77210 (ಕೃಪೆ: ಬಂಗಾರದ ಮನುಷ್ಯರು-ಬೆಳಕಿನ ಬೇಸಾಯದ ಕಥಾನಕ)

ಮಣ್ಣ ಬಿಟ್ಟವರಿಗೆ ಆಧಾರವೇ ಇಲ್ಲ... ಎಂಬ ಕನಕದಾಸರ ಜನಪ್ರಿಯ ಕೀರ್ತನೆ ಮಣ್ಣು ಮುಂತಾದ ಸಕಲ ಚರಾಚರ ವಸ್ತುಗಳ ಪ್ರಾಮುಖ್ಯತೆಯನ್ನು ಸಂಕೇತಿಸುತ್ತದೆ. ಮಣ್ಣನ್ನು ಮರೆತು ಕೃಷಿ ಮಾಡಲು ಮುಂದಾದ ಪರಿಣಾಮ ಈಗ ನಮ್ಮ ಕಣ್ಣ ಮುಂದಿದೆ. ಮಣ್ಣನ್ನು ಮಕ್ಕಳಂತೆ ಜತನದಿಂದ ಕಾಪಾಡಿಕೊಂಡು ಕೃಷಿ ಮಾಡಿದವರು ನೂರಾರು ಮಂದಿ ಇದ್ದಾರೆ. ಅಂತಹವರೇ ಇಂದು ನಮಗೆ ಆದರ್ಶವಾಗಬೇಕು. ಕುಳಿತಲ್ಲಿ ನಿಂತಲ್ಲಿ ಮಣ್ಣಿನ ಬಗ್ಗೆ ಮಾತನಾಡಬೇಕು. ಆ ಮೂಲಕ ಸಹಜ ಕೃಷಿಯ ಬಗ್ಗೆ ಜಾಗೃತಿ ಮೂಡಿಸಬೇಕು.

ಅದು ದೇಶ ವಿದೇಶಗಳ ಕೃಷಿ ವಿದ್ಯಾರ್ಥಿಗಳ ಸ್ಫೂರ್ತಿಯ ನೆಚ್ಚಿನ ತಾಣ. ಪಾರಂಪರಿಕ ಕೃಷಿಯ ಪ್ರಯೋಗಶಾಲೆ. ನಾಲ್ಕು ಎಕರೆ ಪ್ರದೇಶದಲ್ಲಿ ತೇಗ, ಹೊನ್ನೆ, ಬೀಟೆ, ಮತ್ತಿ, ಹಲಸು, ಹೆಬ್ಬೇವು ಸೇರಿದಂತೆ ನಾನಾ ಬಗೆಯ ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಮರಗಳು ಬೆಳೆದು ನಿಂತಿವೆ. ಮನೆಗೆ ಬೇಕಾದ ಎಲ್ಲಾ ಬಗೆಯ ಹಣ್ಣು ತರಕಾರಿಗಳು, ಹಾಲು, ಮೊಸರು, ಮಜ್ಜಿಗೆಗೆ ಬರವಿಲ್ಲ.

ಹೌದು. ಅದೊಂದು ಸುಸ್ಥಿರ, ಸಮೃದ್ಧ, ಸಾವಯವ ತೋಟ. ದನ-ಕರು, ಕೋಳಿ–ಕುರಿ, ಗಿಡ–ಮರ ಎಲ್ಲಾ ಸೇರಿ ಅಲ್ಲೊಂದು ದೇವಲೋಕವೇ ಸೃಷ್ಟಿಯಾದಂತೆ. ಬೆಂಗಳೂರಿನಿಂದ 50 ಕಿ.ಮೀ. ದೂರದ ದೊಡ್ಡಬಳ್ಳಾಪುರದ ಮರೇನಹಳ್ಳಿ ಬಳಿ ಶ್ರೀನಿವಾಸಪುರ ಎಂಬ ಗ್ರಾಮದಲ್ಲಿ ಈ ತಪೋಭೂಮಿ ಇದೆ. ಡಾ. ಎಲ್. ನಾರಾಯಣರೆಡ್ಡಿ ಮತ್ತು ಪತ್ನಿ ಸರೋಜಮ್ಮ ಅವರು ಸೇರಿ ಕಟ್ಟಿದ ತೋಟ ಅದು. ನಾಲ್ಕು ದಶಕಗಳ ಸಾವಯವ ಕೃಷಿ ನಡಿಗೆ ಅವರದು.

ವಿದೇಶದ ವಿಶ್ವ ವಿದ್ಯಾನಿಯವೊಂದು ಒಮ್ಮೆ ನಾರಾಯಣರೆಡ್ಡಿ ಅವರನ್ನು ಉಪನ್ಯಾಸ ನೀಡಲು ಆಹ್ವಾನಿಸಿದಾಗ ನನ್ನ ಕೃಷಿ, ತನ್ನ ಕಾಲ ಮೇಲೆ ನಿಲ್ಲುವರೆಗೆ ನಾನು ನನ್ನ ತೋಟದಿಂದ ಹೊರಗೆ ಬರುವ ಮಾತೇ ಇಲ್ಲ ಎಂದು ನಯವಾಗಿ ನಿರಾಕರಿಸಿದ್ದರು.

ಸಾಮಾಜಿಕ ಜಾಲತಾಣಗಳಲ್ಲಿ ಇತ್ತೀಚಿಗೆ ವಿಡಿಯೋ ಒಂದು ಹರಿದಾಡುತ್ತಿರುವುದನ್ನು ನೀವೂ ನೋಡಿರಬಹುದು. ಕೃಷಿ ಆಸಕ್ತರು ಮತ್ತು ಎನ್‌ಜಿಒ ಸಂಘಟಕರನ್ನು ಉದ್ದೇಶಿಸಿ ಇಳಿವಯಸ್ಸಿನ ವೃದ್ಧರೊಬ್ಬರು ಮಾತನಾಡುತ್ತಾರೆ. ಸರಕಾರ, ರಾಜಕಾರಣಿಗಳು ಮತ್ತು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿರುವ ಅವರು ರೈತರಿಗೆ ಸಬ್ಸಿಡಿ, ಸಾಲಮನ್ನಾ ಯಾವುದು ಬೇಡ ಈ ಭೂಮಿಯಲ್ಲಿ ಶೇ.2 ರಷ್ಟು ಸಾವಯವ ಇಂಗಾಲ (soil carbon) ಹೆಚ್ಚು ಮಾಡಿ ಸಾಕು ಎಂದು ಹೇಳುತ್ತಾರೆ.

ಕೋಟ್ಯಾಂತರ ರೂಪಾಯಿ ವೆಚ್ಚಮಾಡಿ ಬೃಹತ್ ನೀರಾವರಿ ಯೋಜನೆಗಳನ್ನು ಮಾಡುವುದು ಬಿಟ್ಟು ಮಣ್ಣಿನಲ್ಲಿ ಶೇ.2 ರಷ್ಟು ಸಾವಯವ ಇಂಗಾಲ ಹೆಚ್ಚುಮಾಡದಿದ್ದರೆ ಈ ಭೂಮಿಗೆ ಉಳಿಗಾಲವಿಲ್ಲ, ರೈತರಿಗೂ ಭವಿಷ್ಯ ಇಲ್ಲ ಎಂದು ಹೇಳುತ್ತಾರೆ.

ನಾಲ್ಕು ದಶಕಗಳ ಸಾವಯವ ಕೃಷಿ ಪಯಣಕ್ಕೆ ಅವರಿಗೆ ಹತ್ತಾರು ರಾಷ್ಟ್ರೀಯ, ಅಂತರರಾಷ್ಟ್ರೀಯ ಪ್ರಶಸ್ತಿ ಪುರಸ್ಕಾರಗಳು ಲಭಿಸಿವೆ. ಹಾಲೆಂಡ್, ಜಪಾನ್,



ಜರ್ಮನಿ ಸೇರಿದಂತೆ ಹದಿನೈದು ದೇಶಗಳ ಕೃಷಿ ವಿಶ್ವ ವಿದ್ಯಾನಿಲಯಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಅವರು ಉಪನ್ಯಾಸ ನೀಡಿದ್ದಾರೆ. ಏಳೆಂಟು ಭಾಷೆಗಳನ್ನು ನಿರರ್ಗಳವಾಗಿ ಮಾತನಾಡಬಲ್ಲ ನಾರಾಯಣರೆಡ್ಡಿ ಓದಿರುವುದು ಕೇವಲ ಎಂಟನೇ ತರಗತಿ ಎಂದರೆ ನಿಮಗೆ ಆಶ್ಚರ್ಯವಾಗಬಹುದು. ಬದುಕು ಅವರಿಗೆ ಎಲ್ಲಾ ಪಾಠಗಳನ್ನು ಕಲಿಸಿದೆ. ಅವರ ಮನೆಯೇ ಒಂದು ವಿಶ್ವ ವಿದ್ಯಾನಿಲಯ. ದೇಶ ವಿದೇಶದ ಕೃಷಿ ವಿದ್ಯಾರ್ಥಿಗಳು ಇವರ ತೋಟದಲ್ಲಿರುತ್ತಾರೆ.

1972ರಲ್ಲಿ ಕೃಷಿಗೆ ಬಂದ ಇವರು ಅದಕ್ಕೂ ಮೊದಲು ಹೋಟೆಲ್‌ನಲ್ಲಿ ಕ್ಲೀನರ್ ಆಗಿದ್ದರು. ಆಮೇಲೆ ಲಾರಿ ಆಫೀಸ್‌ನಲ್ಲಿ ಪ್ಯೂನ್ ಆಗಿ ಸೇರಿಕೊಂಡು ಗುಮಾಸ್ತನಾಗಿ, ಮ್ಯಾನೇಜರ್ ಆಗಿ ಕೆಲಸ ಮಾಡಿದರು. ಸಂಬಳದಲ್ಲಿ 45 ಸಾವಿರ ರೂಪಾಯಿ ಉಳಿಸಿ ಜಮೀನು ಖರೀದಿ ಮಾಡಿದರು. ಬೆಂಗಳೂರಿನ ವೈಟ್ ಫೀಲ್ಡ್ ಬಳಿ ಜಮೀನು ಹೊಂದಿರುವ ರೆಡ್ಡಿ ನಾನೂ ಈಗ ಕೋಟ್ಯಾಧಿಪತಿ ಎಂದು ನಗುತ್ತಾರೆ.

ವೈಟ್ ಫೀಲ್ಡ್ ಬಳಿ ಇರುವ ಜಮೀನಿಗೆ ಚಿನ್ನದಂತ ಬೆಲೆ ಇದ್ದು ಅದನ್ನು ಮಾರಾಟ ಮಾಡಿ ಎಲ್ಲಾದರೂ ನೂರಾರು ಎಕರೆ ಜಮೀನು ಖರೀದಿಸಿ ಕಾಡು ಬೆಳೆಸಬೇಕು ಎನ್ನುತ್ತಾರೆ.

ಹಣ ಇದ್ದರೆ ಸೈಟು ಬಂಗಲೆ, ಕಾಂಪ್ಲೆಕ್ಸ್ ಅಂತ ಚಿಲ್ಲರೆ ಯೋಚನೆ ಮಾಡುವ ಮಂದಿಯ ನಡುವೆ ನಾರಾಯಣರೆಡ್ಡಿ ಅಂತಿಮ ಸತ್ಯವನ್ನು ಅರಿತ ಸಂತನಂತೆ ಕಾಣುತ್ತಾರೆ. ಇಂತಹ ಮಹಾನ್ ಸಾಧಕನ ಕೃಷಿ ಚಿಂತನೆಗಳನ್ನು ನಿಮ್ಮೊಂದಿಗೆ ಹಂಚಿಕೊಂಡಿದ್ದೇನೆ.

ಮಳೆಗಾಲದ ಆರಂಭದಲ್ಲಿ ರೈತರು ನಾರಾಯಣ ರೆಡ್ಡಿ ಅವರ ಕೃಷಿ ವಿಚಾರಧಾರೆಗಳಿಂದ ಕಲಿತರೆ ಭೂಮಿಯಲ್ಲಿ ಸಾಕಷ್ಟು ನೀರು ಹಿಡಿದಿಟ್ಟುಕೊಂಡು, ಮಣ್ಣನ್ನು ಫಲವತ್ತಾಗಿ ಮಾಡಬಹುದು.

"ರೈತ ಮಣ್ಣನ್ನು ಮರೆತು ಕೃಷಿ ಮಾಡಲು ಮುಂದಾಗಿದ್ದೆ ಇಂದಿನ ಎಲ್ಲಾ ಅನಾಹುತಗಳಿಗೂ ಕಾರಣ. ಒಂದು ಗ್ರಾಂ ಮಣ್ಣಿನಲ್ಲಿ 2 ಕೋಟಿ 90 ಲಕ್ಷ ಸೂಕ್ಷ್ಮಾಣು ಜೀವಿಗಳು ಇದ್ದರೆ ಅದು ಆರೋಗ್ಯವಾದ ಮಣ್ಣು. ಎಲ್ಲ ಸೂಕ್ಷ್ಮಾಣು ಜೀವಿಗಳು ಒಂದೇ ಆಯಸ್ಸು ಪಡೆದಿರುವುದಿಲ್ಲ. ಕೆಲವು ಗಂಟೆಗಳಲ್ಲಿ, ಕೆಲವು ಎರಡು ಮೂರು ದಿನದಲ್ಲಿ ಸಾವನ್ನಪ್ಪುತ್ತವೆ. ಮಣ್ಣಿನಲ್ಲಿ ಬೆರೆತು ಬಿಡುತ್ತವೆ. ಕೆಲವು ಎರಡು ಮೂರು ವಾರ ಇರುತ್ತವೆ. ಇದಕ್ಕಿಂತ ಹೆಚ್ಚು ಇರುವುದಿಲ್ಲ. ಇಂತಹ ಸೂಕ್ಷ್ಮಾಣು ಜೀವಿಗಳಿಗೆ ನಾವು ಸಾವಯವ ಗೊಬ್ಬರ ಕೊಡಬೇಕು, ಗಿಡಗಳಿಗಲ್ಲ. ಈ ಸೂಕ್ಷ್ಮಾಣು ಜೀವಿಗಳಲ್ಲಿ ಶೇ.70 ರಷ್ಟು ಜೀವಿಗಳಿಗೆ ರಸಗೊಬ್ಬರಕ್ಕೆ ಹೊಂದಿಕೊಂಡು ಬದುಕುವ ಶಕ್ತಿ ಇಲ್ಲ. ಕೆಲವು ಮಾತ್ರ ಬದುಕುತ್ತವೆ. ಗಾಳಿ ಇಲ್ಲದೆ ವಾಸ ಮಾಡುವ ಶಕ್ತಿ ಇರೋದು ಅನೋರೋಬಿಕ್. ರಸಗೊಬ್ಬರ ಸಂಪರ್ಕ ಆದ ತಕ್ಷಣವೇ ನಶಿಸಿ ಹೋಗುವುದು ನರೋಬಿಕ್. ಅದಕ್ಕಾಗಿಯೇ, ಒಂದು ಹಿಡಿ ರಸಗೊಬ್ಬರವನ್ನೂ ಮಣ್ಣಿಗೆ ಹಾಕಬಾರದು" ಎನ್ನುತ್ತಾರೆ ಡಾ. ನಾರಾಯಣರೆಡ್ಡಿ.

1960 ರಿಂದ 1972ರವರೆಗೆ 12 ವರ್ಷಗಳ ಕಾಲ ನಮ್ಮ ವಿಜ್ಞಾನಿಗಳು ಕಾಂಪೋಸ್ಟ್ ಗೊಬ್ಬರಕ್ಕೆ ಮಹತ್ವ ನೀಡಲೇ ಇಲ್ಲ. ಪೆಟ್ರೋಲ್ ಬೆಲೆ ಕಡಿಮೆ ಇತ್ತು. ವಿದೇಶಿ ವಿನಿಮಯ ಕಷ್ಟ ಇರಲಿಲ್ಲ. ಸಲೀಸಾಗಿ ಬ್ಯಾರೆಲ್ ಬರೋದು. ನಾಫ್ತಾಲೀನನ್ನು ತರಿಸಿಕೊಂಡರು. ರಸಗೊಬ್ಬರನ ಕಡಿಮೆ ಬೆಲೆಗೆ ಮಾಡಿಕೊಟ್ಟರು. 1972ರಲ್ಲಿ ತೈಲ ಬೆಲೆ ಹೆಚ್ಚಳ ಆಯಿತು. ಆಗ, ಶೇ.30 ರಷ್ಟು ಕಾಂಪೋಸ್ಟ್ ಗೊಬ್ಬರ ಹಾಗೂ ಶೇ.70 ರಷ್ಟು ರಸಗೊಬ್ಬರ ಬಳಸಿ ಎಂದು ಕೃಷಿ ಅಧಿಕಾರಿಗಳು ಹೇಳಿದರು. ಈಗ ಪೆಟ್ರೋಲ್ ಬೆಲೆ ದುಬಾರಿಯಾಗಿದೆ ಅದಕ್ಕೆ ಶೇ.70 ರಷ್ಟು ಕಾಂಪೋಸ್ಟ್ ಶೇ.30ರಷ್ಟು ರಸಗೊಬ್ಬರ ಬಳಸಿ ಅಂತ ಪ್ರಚಾರ ಮಾಡುತ್ತಾ ಇದ್ದಾರೆ. ಆದರೆ ವೈಜ್ಞಾನಿಕವಾಗಿ ಒಂದು ಎಕರೆ ಭೂಮಿಗೆ ಒಂದು ಹಿಡಿ ರಸಗೊಬ್ಬರವನ್ನೂ ಹಾಕಲು ನಾನು ಹೇಳುವುದಿಲ್ಲ

ಮುಂದಿನ ಪುಟಕ್ಕೆ...

ಎಂದು ತಮ್ಮ ಅನುಭವದ ಮಾತುಗಳನ್ನು ಸ್ಪಷ್ಟವಾಗಿ ಹೇಳುತ್ತಾರೆ ರೆಡ್ಡಿ.

ಒಂದು ಎಕರೆ ಮೇಲ್ಮಣ್ಣಿನಲ್ಲಿ (ಸುಮಾರು 9 ಇಂಚು) 600 ಕೆ.ಜಿ. ಬದುಕಿರೋ ಜೀವಿಗಳು ಇರಬೇಕು. ಇಲ್ಲಿಗೆ ವಿಷ ಹಾಕಿ ಎಲ್ಲವನ್ನು ಸಾಯಿಸಿದ್ದೇವೆ. ಎರೆಹುಳು ಇಲ್ಲ. ಒಂದು ದೇಶದ ಶ್ರೀಮಂತಿಕೆ ಅಲ್ಲಿನ ಮಣ್ಣನ್ನು ಅವಲಂಬಿಸಿರುತ್ತದೆ. ಅಲ್ಲಿರೋ ಕಾರ್ಖಾನೆಗಳಿಂದಲ್ಲ. ಬ್ಯಾಂಕಿನ ಠೇವಣಿಗಳಿಂದಲ್ಲ. ಚಿನ್ನದಿಂದ ಅಲ್ಲ. ಮಣ್ಣಿನ ಆರೋಗ್ಯಕ್ಕೆ ನಾವು ಗಮನ ಕೊಡುತ್ತಿಲ್ಲ. ಭೂಮಿಗೆ ವಿಷ ಉಣಿಸಿ ಪ್ರಗತಿ ಪ್ರಗತಿ ಅಂತ ಬೊಬ್ಬೆ ಹೊಡೆಯುತ್ತಿದ್ದೇವೆ.

ನೀವೆಲ್ಲ ಕಾಂಗ್ರೇಸ್ ಗಿಡ ಅಂತೀರಲ್ಲಾ (ಯುಪಟೋರಿಯಾ) ಅದನ್ನು ನೀರಲ್ಲಿ ನೆನೆಸಿ ಗಿಡಗಳಿಗೆ ಸ್ಪ್ರೇ ಮಾಡಿದರೆ ಒಂದಡಿ ಜಾಸ್ತಿ ಬೆಳೆಯುತ್ತೆ. ಗಿಡಗಳಿಗೆ ಗ್ರೋಥ್ ಪ್ರಮೋಟರ್ ಟಾನಿಕ್ ಆಗಿ ಕೆಲಸ ಮಾಡುತ್ತೆ. ಇದನ್ನು ಇಲಾಖೆಯವರು ಹೇಳಿಕೊಡುವುದಿಲ್ಲ. ರೈತ ಸ್ವತಃ ಪ್ರಯೋಗದಿಂದ ಕಂಡುಕೊಳ್ಳಬೇಕು.

ನಾವು ಹಸು ಸಾಕಿದ್ದೇವೆ. ಕಾರಣ ಹಸುಗಳಿಂದ ಗಂಜಲ ಸಿಗುತ್ತೆ ಅಂತ. ಎಷ್ಟು ಲೀಟರ್ ಹಾಲು ಸಿಗುತ್ತೆ ಅಂತ ನೀವು ಲೆಕ್ಕ ಹಾಕಿದರೆ, ಎಷ್ಟು ಲೀಟರ್ ಗಂಜಲ ಸಿಗುತ್ತೆ ಅಂತ ನಾವು ಲೆಕ್ಕ ಹಾಕುತ್ತೇವೆ. ಗಂಜಲ ಸಗಣಿಗಿಂತಲೂ ಒಳ್ಳೆಯ ಗೊಬ್ಬರ. ಮೂರು ಟನ್ ಗೊಬ್ಬರ ಮಾಡೋಕೆ 150 ಕೆ.ಜಿ. ಸಗಣಿ ಸಾಕು. ಜಮೀನಿನಲ್ಲಿ ಸಿಗುವ ಕಸಕಡ್ಡಿ ಸೊಪ್ಪು ಎಲ್ಲ ಕೊಳೆಸಿ ಗೊಬ್ಬರ ಮಾಡಬೇಕು ಎನ್ನುತ್ತಾರೆ.

ಮಧ್ಯ ಪ್ರದೇಶದಲ್ಲಿ ರಿಚಾರಿಯ ಅಂತ ಒಬ್ಬ ಕೃಷಿ ಅಧಿಕಾರಿ ಇದ್ದರು. ಅವರು ಸಾವಯವ ಕೃಷಿ ಪರವಾಗಿದ್ದರು. ಆಗ ಸಿ. ಸುಬ್ರಹ್ಮಣ್ಯಂ ಕೃಷಿ ಸಚಿವರು, ರಾಮಣ್ಣ ಕಾರ್ಯದರ್ಶಿ, ಎಂ.ಎಸ್. ಸ್ವಾಮಿನಾಥನ್ ನಮ್ಮ ಹಸಿರು ಕ್ರಾಂತಿ ರೂವಾರಿ. ಇವರೆಲ್ಲಾ ರಿಚಾರಿಯಾ ಅವರ ಬಳಿಗೆ ಹೋಗಿ ನೀವ್ಯಾಕೆ ರಸಗೊಬ್ಬರ ಬಳಕೆ ಬಗ್ಗೆ ಅಪಪ್ರಚಾರ ಮಾಡ್ತೀರಿ ಅಂತ ರೇಗಾಡಿದರಂತೆ. ಆಗ ರಿಚಾರಿಯಾ ಕೇಂದ್ರ ಸಚಿವರ ಮುಖಕ್ಕೆ ಪೇಪರ್ ಬಿಸಾಡಿ ನಾನು ಮಾಡ್ತೀರೋದು ಪಾಪ. ನೀವು ಮಾಡ್ತಿರೋದು ದೇಶ ಸೇವೆ ಅಂತ ಹೊರಟುಹೋದರು. ಈಗ ಭೂಪಾಲ್‌ನಲ್ಲಿ ಜಾಗ ತೆಗೆದುಕೊಂಡು ಸಾವಯವ ಕೃಷಿ ಮಾಡುತ್ತಿದ್ದಾರೆ. ಭತ್ತದಲ್ಲಿ 16 ಸಾವಿರ ತಳಿಗಳನ್ನು ಅವರು ಸಂಗ್ರಹ ಮಾಡಿದ್ದಾರೆ. 10 ಸಾವಿರ ತಳಿಗಳನ್ನು ಇಲಾಖೆ ಮಾರಾಟ ಮಾಡಿ ಆಗಿತ್ತು. ಇನ್ನೂ ಆರು ಸಾವಿರ ತಳಿ ಮಾರಿದ್ದರೆ ಬಿತ್ತನೆ ಬೀಜ ನಮಗೆ ವಿದೇಶದಿಂದ ಬರಬೇಕಾಗಿತ್ತು. ರಿಚಾರಿಯಾ ಇಲ್ಲದೆ ಇದ್ದರೆ ಭತ್ತದ ಬೀಜಕ್ಕಾಗಿ ನಾವು ಫಿಲಿಫೈನ್ಸ್‌ಗೆ ಹೋಗಬೇಕಾಗಿತ್ತು. ಅವರು ದೇವರ ಹಾಗೆ ಬಂದು ನಮ್ಮನ್ನು ಕಾಪಾಡಿದರು.

ರಸಗೊಬ್ಬರ ಮತ್ತು ಕೀಟನಾಶಕ ಬಳಕೆಯಿಂದ ಭಾರತದಲ್ಲಿ ಪರಿಸರ ಮಾಲಿನ್ಯ ಮಾಡುತ್ತಾ ಇರೋದು ಉದ್ಯಮಿಗಳಿಗಿಂತ ಜಾಸ್ತಿ ರೈತರು. ವಿದೇಶಗಳಿಗೆ ಹೋಲಿಸಿದರೆ ರಸಗೊಬ್ಬರ ಬಳಕೆ ನಮ್ಮಲ್ಲಿ ಕಡಿಮೆ ನಿಜ. ಆದರೆ ನಾವು ಕಡಿಮೆ ಬಳಸಿದರೂ ಸರಿಯಾದ ರೀತಿಯಲ್ಲಿ ಬಳಸದೆ ಉದ್ದಿಮೆಗಳಿಗಿಂತ ಹೆಚ್ಚು ಪರಿಸರ ಹಾಳು ಮಾಡುತ್ತಿದ್ದೇವೆ.

ಯುರೋಪ್, ಡೆನ್ಮಾರ್ಕ್, ಹಾಲೆಂಡ್, ಜರ್ಮನಿಯಲ್ಲಿ ಆಮ್ಲಮಳೆ ಬೀಳುತ್ತೆ. ಆ ಮಳೆಯಲ್ಲಿ ನೆನೆದರೆ ಮನುಷ್ಯರು ಸುಟ್ಟು ಹೋಗುತ್ತಾರೆ. ಕಾಡುಗಳು ಸುಟ್ಟುಹೋಗಿವೆ. ನಾನು ಅದನ್ನು ನೋಡಿದೆ. ಕಾರಣ ಇದಕ್ಕೆ ಕೇವಲ ಉದ್ದಿಮೆಗಳು ಕಾರಣವಲ್ಲ. ರೈತರು ಕಾರಣ. ಅದಕ್ಕಾಗಿ ಈಗಲಾದರೂ ನಾವು ಎಚ್ಚೆತ್ತುಕೊಂಡು ಪರಿಸರ ಸ್ನೇಹಿ ಕೃಷಿ ಮಾಡದಿದ್ದರೆ ಅಪಾಯ ನಿಶ್ಚಿತ ಎಂದು ನಾರಾಯಣರೆಡ್ಡಿ ಎಚ್ಚರಿಕೆ ನೀಡುತ್ತಾರೆ.

ಹಣ ಮಾಡಲು ಹೊರಟ ಆಧುನಿಕ ಕೃಷಿ ಭೂಮಿ ತಾಯಿಗೆ ಮಾಡುತ್ತಾ ಇರೋ ಅಪಚಾರ ಇದು. ಭೂಮಿ ತಾಯಿ ಹೂವು, ಬಳ್ಳಿ, ಹಸಿರಿನ ಸೆರಗು ಹೊದ್ದು, ಚಿನ್ನದ ಒಡವೆ ತೊಟ್ಟು ಭೂಷಣವಾಗಿ ಇರಬೇಕಿತ್ತು. ಇವತ್ತು ನಾವು ರಸಗೊಬ್ಬರ, ಕೀಟನಾಶಕ ಬಳಸಿ ಅವಳನ್ನು ಬೆತ್ತಲೆ ಮಾಡುತ್ತಿದ್ದೇವೆ.

ನಾವು ವ್ಯವಸಾಯದ ಬಗ್ಗೆ ನಮ್ಮ ಮಕ್ಕಳಿಗೆ ಸರಿಯಾದ ಪಾಠ ಹೇಳಿಕೊಟ್ಟಿಲ್ಲ. ಇದೊಂದು ದರಿದ್ರ ಕೆಲಸ, ಲಾಭ ಇಲ್ಲ, ಗೌರವ ಇಲ್ಲ ಅಂತ ತಿಳಿದಿದ್ದಾರೆ. ಇದು ಶ್ರೇಷ್ಠ ಕೆಲಸ. ಸರಿಯಾಗಿ ಕೆಲಸ ಮಾಡಿದರೆ ರೈತನಾಗಿರೋದು ಹೆಮ್ಮೆ ವಿಷಯ ಆಗಬೇಕು ಗೌರವ ಸಲ್ಲಬೇಕು ಎನ್ನುವುದು ಡಾ. ಎಲ್. ನಾರಾಯಣ ರೆಡ್ಡಿ ಅವರ ನೇರ ನುಡಿ.

ಸಸ್ಯ ಮತ್ತು ಮಣ್ಣಿನ ಸಂಬಂಧದ ಬಗ್ಗೆ ವೈಜ್ಞಾನಿಕವಾಗಿ ಮಾತನಾಡಬಲ್ಲ ನಾರಾಯಣರೆಡ್ಡಿ ಅಂತಹ ಕೃಷಿ ಸಾಧಕರು ವಿರಳ. ಇಂತಹ ಹಿರಿಯ ಜೀವಿಗಳು ಸಾವಯವ ಕೃಷಿಯ ಬಗ್ಗೆ ಖಚಿತವಾಗಿ ತಮ್ಮ ಅನುಭವದಿಂದ ವಿಜ್ಞಾನಿಗಳಿಗೆ ಉತ್ತರ ನೀಡಬಲ್ಲ ಕೃಷಿ ತಜ್ಞರಾಗಿದ್ದಾರೆ. ಇಂತಹವರ ಸಂತತಿ ಹೆಚ್ಚಲಿ ಎನ್ನುವುದೆ ನಮ್ಮ ಆಶಯ.

ಈ ಕೃಷಿ ಬ್ರಹ್ಮ ನಾರಾಯಣರೆಡ್ಡಿ ಅವರು ಜನವರಿ 2019ರಲ್ಲಿ ಇಹಲೋಕ ತ್ಯಜಿಸಿ ಅವರ ಕೃಷಿ ನೆನಪುಗಳನ್ನು ನಮ್ಮೊಂದಿಗೆ ಬಿಟ್ಟಿದ್ದಾರೆ. ■

# ಪರಾಗ–ಜೇನ್ನೊಣ

✍ಶಿರಂಕಲ್ಲು ಕೃಷ್ಣ ಭಟ್ ಮೊ: 79751 59138



ಪರಾಗ ಮತ್ತು ಜೇನ್ನೊಣಗಳಿಗೆ ಅವಿನಾಭಾವ ಸಂಬಂಧ. ಮುಂಜಾನೆ ಜೇನ್ನೊಣಗಳು ತಮ್ಮ ಎರಡೂ ಕಾಲುಗಳ ಪರಾಗ ಕುಕ್ಕೆಗಳಲ್ಲಿ ಪರಾಗವನ್ನು ತುಂಬಿಕೊಂಡು ಬರುವ ದೃಶ್ಯ ಅಸದೃಶ.

ಜೇನ್ನೊಣಗಳು ಪರಾಗವನ್ನು ತಂದು ತನ್ನ ಕುಟುಂಬದ ಮರಿ ನೊಣಗಳಿಗೆ ಜೇನುತುಪ್ಪದೊಂದಿಗೆ ಬೆರೆಸಿ ಕೊಡುತ್ತವೆ.

ಜೇನು ಪೆಟ್ಟಿಗೆಯ ಪಕ್ಕದಲ್ಲಿ ನಿಂತು ನೋಡಿದಾಗ ಜೇನ್ನೊಣಗಳು ತುಂಬಾ ಪರಾಗವನ್ನು ತರುತ್ತಿದ್ದರೆ ಜೇನು ಕುಟುಂಬ ಸದೃಢವಾಗಿದೆ, ಸದೃಢದಲ್ಲಿ ಪರಾರಿ ಆಗದು ಎಂದು ಕುಟುಂಬದ ಮುಚ್ಚಳ ತೆಗೆಯದೇ ತಿಳಿದುಕೊಳ್ಳಬಹುದು. (ರಾಣಿ ಇಲ್ಲದ ಕುಟುಂಬದಲ್ಲಿ ಕೆಲಸಗಾರ ನೊಣಗಳು ಇಟ್ಟ ಮೊಟ್ಟೆಯಿಂದ ಹೊರಬಂದ ಮರಿ ಗಂಡು ನೊಣಗಳಿಗಾಗಿಯೂ ಸ್ವಲ್ಪ ಸ್ವಲ್ಪ ಪರಾಗ ತರುವುದಿದೆ.) ಜೇನ್ನೊಣಗಳು ಮಳೆಗಾಲಕ್ಕೆ ಬೇಕಾದ ಪರಾಗವನ್ನೂ ತಂದು ಎರಿಗಳಲ್ಲಿ ತುಂಬಿಸಿಡುತ್ತವೆ.

ತೆಂಗಿನ ಮರಗಳಲ್ಲಿ ವರ್ಷದ ಎಲ್ಲಾ ಕಾಲದಲ್ಲೂ ಪರಾಗ ಧಾರಾಳವಾಗಿ ಸಿಗುವುದರಿಂದ ಮಳೆಗಾಲದಲ್ಲಿ ಹೆಚ್ಚು ತೆಂಗಿನ ಮರಗಳಿರುವ ಸ್ಥಳದಲ್ಲಿರುವ ಜೇನು ಕುಟುಂಬಗಳು ಸದೃಢವಾಗಿರುತ್ತವೆ. ಅಂತಹಾ ಕುಟುಂಬಗಳಿಗೆ ಮಳೆಗಾಲದಲ್ಲಿ ಮಯಣದ ಹುಳ, ಕಣಜದ ದುಂಬಿ ಇತ್ಯಾದಿ ಶತ್ರುಗಳ ಹಾವಳಿ ಕಡಿಮೆ. ಪರಾರಿ ಆಗುವ ಸಾಧ್ಯತೆಯೂ ಕಡಿಮೆ.

ಜೇನ್ನೊಣಗಳು ತಮ್ಮ ಕುಟುಂಬದ ಅಭಿವೃದ್ಧಿಗೆ ಪರಾಗವನ್ನು ತರುತ್ತವೆ.ಆದರೆ ಎಲ್ಲರಿಗೂ ತಿಳಿದಿರುವಂತೆ ಮಾನವನಿಗೆ, ಸಸ್ಯ ಸಂಕುಲಕ್ಕೆ, ಪ್ರಾಣಿ–ಪಕ್ಷಿಗಳ ಪ್ರಪಂಚಕ್ಕೆ ಪರಾಗ ಸ್ಪರ್ಶದ ಮೂಲಕ ಇವುಗಳು ಮಾಡುವ ಉಪಕಾರ ಅನನ್ಯ.

ಇತ್ತೀಚೆಗೆ ಜೇನುಕುಟುಂಬಗಳಿಗೆ ನೆಲೆಸಲು ಸ್ವಾಭಾವಿಕ ವಾಸಸ್ಥಾನಗಳೇ ಇಲ್ಲದಾಗಿದೆ.

ಕೃಷಿಕರೆಲ್ಲಾ ಜೇನುತುಪ್ಪಕ್ಕಾಗಿ ಅಲ್ಲದಿದ್ದರೂ ಪರಾಗಸ್ಪರ್ಶಕ್ಕಾಗಿಯಾದರೂ ಜೇನು ಕುಟುಂಬಗಳನ್ನು ಸಾಕುವುದು ಒಳ್ಳೆಯದು.

ಹೊಸ ಮಡಿಕೆಗೆ ಜೇನುಮಯಣ ಮತ್ತು ದಾಲ್ಚಿನ್ನಿ ಎಲೆಯ ರಸವನ್ನು ಸವರಿ ತಂಪಾದ, ಇರುವೆ ಬಾರದ ಜಾಗದಲ್ಲಿ ಇಟ್ಟರೆ ತಾನಾಗಿಯೇ ಜೇನು ಕುಟುಂಬ ಬಂದು ನೆಲೆಸುತ್ತದೆ.

ಸಾಕಲಾಗದಿದ್ದರೆ ಅವುಗಳಿಗೆ ಸ್ವಾಭಾವಿಕವಾಗಿ ಬಂದು ನೆಲೆಸಲು ಅನುಕೂಲವಾಗುವಂತೆ ಮಾಡಬಹುದು. ತೋಟದಲ್ಲಿ ಸತ್ತುಹೋದ ಅಡಿಕೆ ಮರ, ಈಚಲು ಮರ ಇತ್ಯಾದಿ ಮರಗಳನ್ನು ಸಾಧ್ಯವಿದ್ದರೆ ಕಡಿಯದೆ ಬಿಟ್ಟರೆ ಅವುಗಳ ಪೊಟರೆಗಳಲ್ಲಿ ಜೇನು ಕುಟುಂಬ ಬಂದು ಸೇರಿಕೊಳ್ಳುತ್ತದೆ.

ಕಲ್ಲಂಗಡಿ, ಕುಂಬಳ ಕಾಯಿ ಇತ್ಯಾದಿಗಳಲ್ಲಿ ಜೇನ್ನೊಣಗಳ ಮೂಲಕ ಪರಾಗಸ್ಪರ್ಶ ಕ್ರಿಯೆ ಆಗುವುದು ನಮಗೆ ತಿಳಿದೇ ಇರುವ ವಿಚಾರ. ಅಡಿಕೆ, ತೆಂಗು ಇತ್ಯಾದಿಗಳಲ್ಲಿ ಜೇನ್ನೊಣಗಳ ಮೂಲಕ ಮೂವತ್ತು ಶೇಕಡಾ ಫಲ ಹೆಚ್ಚಾಗುವುದು.

ನಮ್ಮ ನಮ್ಮ ಜಮೀನಿನ ಪಕ್ಕದಲ್ಲಿ ಜೇನ್ನೊಣಗಳ ಝೇಂಕಾರ ಹೆಚ್ಚು ಹೆಚ್ಚು ಕೇಳಿಬರಲಿ. ಸಮೃದ್ಧ ಭಾರತ ಸಂಪದ್ಭರಿತ ಭಾರತ ನಮ್ಮದಾಗಲಿ.

**ವಿಶ್ವ ಭೂದಿನ ಏಪ್ರಿಲ್-22**
**ವಿಶ್ವ ಜೀವ ವೈವಿಧ್ಯತೆ ದಿನ ಮೇ-22**

# ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ (ನೋಂ) ಆಡಳಿತ ಮಂಡಳಿ

| | | | |
|---|---|---|---|
| ಶ್ರೀ ದೀಪಕ್ ಶರ್ಮ<br>ಅಧ್ಯಕ್ಷರು<br>ಮೊ.9986232094 | ಶ್ರೀ ಎನ್. ಸಂಪಂಗಿ<br>ಸಹ ಅಧ್ಯಕ್ಷರು<br>ಮೊ.9980294242 | ಶ್ರೀ ಆರ್.ಎಮ್. ಪಾಲಣ್ಣ<br>ಉಪಾಧ್ಯಕ್ಷರು<br>ಮೊ.9945015617 | ಶ್ರೀ ಎ.ಎಂ. ಅಣ್ಣಯ್ಯ<br>ಕಾರ್ಯದರ್ಶಿ<br>ಮೊ.9448019306 |
| ಡಾ. ಎಂ. ಮಹದೇವ ಮೂರ್ತಿ<br>ಜಂಟಿ ಕಾರ್ಯದರ್ಶಿ<br>ಮೊ.9845588203 | ಶ್ರೀ ಕೆ.ಎಸ್. ಆನಂದ್<br>ಖಜಾಂಚಿ<br>ಮೊ.9448943995 | ಶ್ರೀ ಎನ್.ಡಿ. ತಿವಾರಿ<br>ಸದಸ್ಯರು<br>ಮೊ.9448360161 | ಶ್ರೀ ಬಿ. ಶಿವನಗೌಡ<br>ಸದಸ್ಯರು<br>ಮೊ.9448124087 |
| ಶ್ರೀ ಸಿದ್ದೇಗೌಡ<br>ಸದಸ್ಯರು<br>ಮೊ.9449244323 | ಶ್ರೀ ಎಸ್. ನಾರಾಯಣಸ್ವಾಮಿ<br>ಸದಸ್ಯರು<br>ಮೊ.9880042155 | ಶ್ರೀ ಬಿ.ಎಸ್. ರಘುನಾಥ<br>ಸದಸ್ಯರು<br>ಮೊ.9945003993 | ಶ್ರೀ ಗುರುಮೂರ್ತಿ<br>ಸದಸ್ಯರು<br>ಮೊ.9945754650 |
| ಡಾ॥ ಎನ್. ಸ್ವಾಮಿರಾವ್<br>ಸಹ ಸದಸ್ಯರು<br>ಮೊ.9880101200 | ಶ್ರೀಮತಿ ಶೋಭ ಎಚ್.ಜಿ.<br>ಸಹ ಸದಸ್ಯರು<br>ಮೊ.9448945367 |  | ವಿಶ್ವ ಜೇನು ಕೃಷಿ<br>ದಿನಾಚರಣೆ ಮೇ 20 |

ಜಾಹೀರಾತು



Visit Agumbe

**Guddekeri Homestay**

Guddekeri Post,
Thirthahalli Taluk,
Shimoga Dist.
Pin code - 577411

Mob: +91 9844737273
Website:
www.guddekerihomestay.com
Like us on Facebook:
fb.me/guddekerihomestay

Follow us on Instagram:
@guddekeri_homestay



ಜಾಹೀರಾತು


ಅರಣ್ಯ ಇಲಾಖೆ

# ಅರಣ್ಯ ಸಂಪತ್ತು

## ಜೀವಜಾಲದ ಅದ್ಭುತ ಜಗತ್ತು



**ಶ್ರೀ ಬಿ.ಎಸ್. ಯಡಿಯೂರಪ್ಪ**
ಸನ್ಮಾನ್ಯ ಮುಖ್ಯಮಂತ್ರಿಗಳು




ಮಾನ್ಯ ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಸಚಿವರಾದ **ಶ್ರೀ ಆನಂದ್ ಸಿಂಗ್** ಅವರು ಆನೆ ತರಬೇತಿ ಶಿಬಿರಕ್ಕೆ ಭೇಟಿ ನೀಡಿದ ಸಂದರ್ಭ

ಕಾಡುಗಳು ಜೀವಿ ವೈವಿಧ್ಯತೆಯ ಬಹುದೊಡ್ಡ ಆಡಂಬೋಲ. ಜೀವವಿಕಾಸದ ಆಗರ ಮತ್ತು ತವರು ಕಾಡುಗಳೇ ಎಂಬುದು ಅವುಗಳ ಸುದೀರ್ಘ ಕಾಲದ ಅಸ್ತಿತ್ವ ಮತ್ತು ಪ್ರಾಮುಖ್ಯತೆಗೆ ಬಹುದೊಡ್ಡ ಸಾಕ್ಷಿ. ಮನುಷ್ಯ ಮೊದಲ್ಗೊಂಡು ಸೃಷ್ಟಿಯಲ್ಲಿ ಕಂಡುಬರುವ ಕೋಟ್ಯಾಂತರ ಜೀವಜಾಲಕ್ಕೆ ಆಸರೆಯಾದ ಕಾಡುಗಳು ನಾಗರಿಕತೆಯ ವಿಕಸನಕ್ಕೆ ಬಹುದೊಡ್ಡ ಕಾಣಿಕೆ ನೀಡಿವೆ. ಅರಣ್ಯ ಮತ್ತು ವನ್ಯಜೀವಿಗಳ ಮೇಲೆ ಮನುಷ್ಯನ ನಿರಂತರ ದಾಳಿಯಿಂದಾಗಿ ಎಷ್ಟೋ ಅಮೂಲ್ಯ ಸಂಪತ್ತುಗಳು ನಶಿಸಿಹೋಗಿವೆ. ಇನ್ನೂ ಕೆಲವು ವಿನಾಶದ ಅಂಚಿಗೆ ತಲುಪಿವೆ. ಇದನ್ನು ತಡೆಗಟ್ಟುವುದು, ಸಂರಕ್ಷಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ.

ಕಾಡುಗಳನ್ನು ಬೆಳೆಸೋಣ,
ವನ್ಯಜೀವಿಗಳನ್ನು ರಕ್ಷಿಸೋಣ.

ನಮ್ಮ ಬದುಕನ್ನು ಸಮೃದ್ಧಗೊಳಿಸಿ,
ಸಂತಸದ ಸಿರಿಯಲ್ಲಿ ಸಾಗೋಣ.



ಅರಣ್ಯ ಸಹಾಯವಾಣಿ : 1926

Likes on

"ದೇಶದ ಕಾಡು, ವನ್ಯಜೀವಿ, ನದಿಗಳು ಸೇರಿ ಪರಿಸರ ಉಳಿಸಿ ಬೆಳೆಸುವುದು" – ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ















ವಿಳಾಸ: ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ (ನೋಂ), ವನವಿಕಾಸ, ನೆಲಮಹಡಿ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು –560003
ದೂ: 080 23566126 Email: iaftbangalore@gmail.com, website: www.iaft.co.in